ಸಂಪುಟ: 01 ಸಂಚಿಕೆ: 82 ಪುಟ: 04 ಬೆಲೆ: 02 ಶನಿವಾರ ಸೆಪ್ಟೆಂಬರ್ 05 2026 ಮೊ: 7411699198/7406928404

# ಅಜಾತ ಶತ್ರು

ಜನರ ನುಡಿ.... ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ ಸತ್ಯದ ಧ್ವನಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು

Volume:01 Issue: 82 Pages:04 Price:02 SATURDAY SEPTEMBER 05 2026 RNI NO: KNKAN/26/A4008 E-mail:ajathashathru2026@gmail.com




## ಸತ್ಯವಾಣಿ ಕಟೋಕ್ತಿ

ದಿನ ಕಳೆದಂತೆ ಅರ್ಥ ಕಳೆದುಕೊಳ್ಳುತ್ತಿರುವ ವಾಟ್ಸಪ್ ಯ್ಯೂನಿವರ್ಸಿಟಿಯಲ್ಲಿ ಅನರ್ಥಕಾರಿ ಸ್ನೇಹಿತರನ್ನು ಇರಿಸಿಕೊಳ್ಳುವುದು ಒಂದೇ ಇರುಳ ಕಂಡ ಬಾವಿಯಲ್ಲಿ ಹಗಲು ಬೀಳುವುದು ಒಂದೆ.



ವಾಣಿ ಭಂಡಾರಿ.



ಶ್ರೀಇಶಾನ್ ಗೋಡಿಯವರ್ ಹಾಗೂ ಧಾನವಿ ಗೋಡಿಯವರ್

# ಅಂಚೆ ಸೇವೆ ಸದುಪಯೋಗಕ್ಕೆ ರಾಜಶೇಖರ್ ಕರೆ

ಅ.ಶ. ಸುದ್ದಿ ಕುಕನೂರು

**ಕುಕನೂರು: ಗ್ರಾಮೀಣ ಭಾಗದ ಸಾರ್ವಜನಿಕರಿಗೆ ವಿವಿಧ ಅಂಚೆ ಹಾಗೂ ಜನಪರ ಸೇವೆಗಳನ್ನು ಮತ್ತಷ್ಟು ಸುಲಭವಾಗಿ ತಲುಪಿಸುವ ಉದ್ದೇಶದಿಂದ ಕುಕನೂರು ತಾಲೂಕಿನ ತಳಕಲ್ ಗ್ರಾಮದಲ್ಲಿ ನೂತನ ಉಪ ಅಂಚೆ ಕಚೇರಿಯನ್ನು ಶುಕ್ರವಾರ ಉದ್ಘಾಟಿಸಲಾಯಿತು.**

ಕೊಪ್ಪಳ ಸಂಸದ ರಾಜಶೇಖರ್ ಹಿಟ್ನಾಳ ಅವರು ಸಸಿಗೆ ನೀರುಣಿಸುವ ಮೂಲಕ ನೂತನ ಉಪ ಅಂಚೆ ಕಚೇ–ರಿಯ ಉದ್ಘಾಟನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ತಳಕಲ್‌ನಲ್ಲಿ ಉಪ ಅಂಚೆ ಕಚೇರಿ ಆರಂಭವಾಗಿರುವುದರಿಂದ ಈ ಭಾಗದ ಜನರ ಬಹುದಿನಗಳ ಬೇಡಿಕೆ ಈಡೇರಿದಂತಾಗಿದೆ ಎಂದು



ಹೇಳಿದರು.

ತಳಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ವಿವಿಧ ಅಂಚೆ ಸೇವೆಗಳಿಗಾಗಿ ದೂರದ ಪ್ರದೇಶಗಳಿಗೆ ತೆರಳುವ ಅಗತ್ಯ ಇನ್ನು ಮುಂದೆ ಕಡಿಮೆಯಾಗಲಿದೆ. ಸ್ಥಳೀಯವಾಗಿಯೇ ಹಲವು ಪ್ರಮುಖ ಸೇವೆಗಳು ದೊರೆಯಲಿದ್ದು, ಸಾರ್ವಜನಿಕರು ಅಂಚೆ ಇಲಾಖೆಯಲ್ಲಿರುವ ಎಲ್ಲಾ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

**ಕಡಿಮೆ ಶುಲ್ಕದಲ್ಲಿ ಉತ್ತಮ ಸೇವೆ:** ಕೊಪ್ಪಳದಲ್ಲಿ ಡಿವಿಷನ್ ಕಚೇರಿ ಸ್ಥಾಪನೆಗೆ ಮಾಜಿ ಸಂಸದ ಸಂಗಣ್ಣ ಕರಡಿ ಅವರು ಸಾಕಷ್ಟು ಶ್ರಮಿಸಿದ್ದರು. ಅಂಚೆ ಇಲಾಖೆಯ ಮೂಲಕ ಸಾರ್ವಜನಿಕ–ರಿಗೆ ಕಡಿಮೆ ಶುಲ್ಕದಲ್ಲಿ ಉತ್ತಮ ಹಾಗೂ ವಿಶ್ವಾಸಾರ್ಹ ಸೇವೆಗಳು ಲಭ್ಯವಾಗುತ್ತಿವೆ ಎಂದು ರಾಜಶೇಖರ್ ಹಿಟ್ನಾಳ ಹೇಳಿದರು.

ಮುಂದಿನ ದಿನಗಳಲ್ಲಿ ಖಾಸಗಿ ಸಂಸ್ಥೆಗಳ ಸೇವೆಗಳ ಮಾದರಿಯಲ್ಲಿಯೇ ಅಂಚೆ ಇಲಾಖೆಯ ಸೇವೆಗಳು ಇನ್ನಷ್ಟು ವಿಸ್ತಾರಗೊಳ್ಳಲಿವೆ. ಮೊಬೈಲ್ ಮತ್ತು ಆಧುನಿಕ ತಂತ್ರಜ್ಞಾನಗಳ ಬಳಕೆ ಹೆಚ್ಚಾದ ಹಿನ್ನೆಲೆಯಲ್ಲಿ ಅಂಚೆ ಕಚೇರಿಗಳ ಸಾಂಪ್ರದಾಯಿಕ ಕಾರ್ಯವೈಖರಿಯಲ್ಲಿ ಬದಲಾವಣೆ ಕಂಡುಬಂದಿದ್ದರೂ, ಸಾರ್ವಜನಿಕರ ಅಗತ್ಯಕ್ಕೆ ಅನುಗುಣವಾಗಿ

> “ಸುರಕ್ಷಿತ ಉಳಿತಾಯಕ್ಕಾಗಿ ಅಂಚೆ ಇಲಾಖೆಯ ಯೋಜನೆಗಳಲ್ಲಿ ಹೂಡಿಕೆ ಮಾಡಲು ಮಹಿಳೆಯರಿಗೆ ಸಲಹೆ.”

ಇಲಾಖೆ ಹೊಸ ಸೇವೆಗಳನ್ನು ಒದಗಿಸುತ್ತಿದೆ ಎಂದರು.

ಆಧಾರ್ ಕಾರ್ಡ್ ತಿದ್ದುಪಡಿ, ಉಳಿತಾಯ ಖಾತೆ ಸೇರಿದಂತೆ ವಿವಿಧ ಜನಪರ ಯೋಜನೆಗಳು ಮತ್ತು ಸೇವೆಗಳು ಅಂಚೆ ಕಚೇರಿಗಳ ಮೂಲಕ ಲಭ್ಯವಾಗುತ್ತಿವೆ ಎಂದು ತಿಳಿಸಿದರು.

2ನೇ ಪುಟಕ್ಕೆ

# ಮುದ್ದು ಶ್ರೀ ಕೃಷ್ಣ ಜನ್ಮಾಷ್ಟಮಿಯ ಸಡಗರ ಸಂಭ್ರಮದ ಬೆಣ್ಣೆ ಅಲಂಕಾರ

ಅ.ಶ. ಸುದ್ದಿ ಕೊಪ್ಪಳ

ಕೊಪ್ಪಳ: ನಗರದ ಶ್ರೀ ವಿಠ್ಠಲ ಕೃಷ್ಣ ದೇವಸ್ತಾನದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತಿದೆ. ಶುಕ್ರವಾರ ಮತ್ತು ಶನಿವಾರ ಎರಡುದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನದಲ್ಲಿ ಜರುಗಲಿದ್ದು, ಶ್ರೀ ಮದ್ಯೋಗೀಶ್ವರ ಯಾಜ್ಞವಲ್ಕ್ಯ ಪ್ರತಿಷ್ಠಾನದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ. ಕೃಷ್ಣಾಷ್ಠಮಿ ಅಂಗವಾಗಿ ದೇವಸ್ಥಾನದಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದು, ದೇವಸ್ಥಾನಕ್ಕೆ ಆಗಮಿಸುವ ಭಕ್ತರನ್ನು ಮಂತ್ರ ಮುಗ್ದರನ್ನಾಗಿಸುವಂತಿತ್ತು. ಮೊದಲನೆ ದಿನವಾದ ಶುಕ್ರವಾರ ಬೆಳಿಗ್ಗ 5 ಗಂಟೆಗೆ ಶ್ರೀ ವಿಠ್ಠಲ ಕೃಷ್ಣ ಹಾಗೂ ಶ್ರೀ ಮುಖ್ಯ ಪ್ರಾಣ ದೇವರಿಗೆ ಸುಪ್ರಭಾತ, ನಿರ್ಮಲಾಭಿಷೇಕ, ವಿಷ್ಣು



ಸಹಸ್ರನಾಮ ಪಾರಾಯಣ ಸೇರಿದಂತೆ ವಿವಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬೆಣ್ಣೆ ಅಲಂಕಾರ : ಕೃಷ್ಣ ಜನ್ಮಾಷ್ಠಮಿಯ ಅಂಗವಾಗಿ ಭಕ್ತರಿಂದ ಶ್ರೀ ಕೃಷ್ಣನಿಗೆ ವಿಶೇಷ ಬೆಣ್ಣೆ ಅಲಂಕಾರ ಮಾಡಲಾಗಿತ್ತು. ನಂತರ ಮಹಿಳೆಯರು ಮತ್ತು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ವೇಷಭೂಷಣ ಸ್ಪರ್ಧೆ ಜರುಗಿತು. ದೇವಸ್ಥಾನಕ್ಕೆ ಆಗಮಿಸಿದ ಸಹಸ್ರಾರು ಭಕ್ತರು ಆಗಮಿಸಿ ಶ್ರೀ ಕೃಷ್ಣನ ದರ್ಶನ ಪಡೆದರು. ಅರ್ಘ್ಯ ಪ್ರಧಾನ : ಸಂಪ್ರದಾಯದಂತೆ ದೇವಸ್ಥಾನದಲ್ಲಿ ಮದ್ಯರಾತ್ರಿ 12:03 ಗಂಟೆಗೆ ಉಪವಾಸ ನಿರತ ಭಕ್ತರಿಂದ ಅರ್ಘ್ಯ ಪ್ರಧಾನ ಕಾರ್ಯಕ್ರಮ ಆಯೋಜಿಸಲಾಗಿತ್ತು. ಇಂದಿನ ಕಾರ್ಯಕ್ರಮ: ಇಂದು ಸೆ.5ರಂದು ಶನಿವಾರ ಬೆಳಿಗ್ಗೆ 5 ಗಂಟೆಗೆ ಶ್ರೀ ವಿಠ್ಠಲ ಕೃಷ್ಣ ಹಾಗೂ ಶ್ರೀ ಮುಖ್ಯ ಪ್ರಾಣ ದೇವ–ರಿಗೆ ಸುಪ್ರಭಾತ, ನಿರ್ಮಲಾಭಿಷೇಕ, ವಿಷ್ಣು ಸಹಸ್ರನಾಮ ಪಾರಾಯಣ ತೊಟ್ಟಿಲು ಸೇವೆ ಮಧ್ಯಾಹ್ನ 4ಗಂಟೆಗೆ ಪ್ರವಚನ 5:30ಕ್ಕೆ ದೇವರ ಗ್ರಾಮ ಪ್ರದಕ್ಷಿಣೆ, ಗೋಪಾಲಕಾವಲಿ ಇತರ ಧಾರ್ಮಿಕ ಕಾರ್ಯಕ್ರಮ ಜರುಗಲಿದೆ ಸರ್ವರು ಆಗಮಿಸಿ ಯಶಸ್ವಿಗೊಳಿಸುವಂತೆ ದೇವಸ್ಥಾನ ಸಮಿತಿ ಪ್ರಕಟಣೆಯಲ್ಲಿ ಕೋರಿದೆ.




## ಬಡ್ಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಕೊಪ್ಪಳ: ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ/ಇತರೆ ವೃತ್ತಿಪರರಿಗೆ ಹಾಗೂ ಗುಡಿ ಕೈಗಾ–ರಿಕೆಗಳಿಗೆ ಬಡ್ಡಿ ಸಹಾಯಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಗರಿಷ್ಠ ರೂ. 5 ಲಕ್ಷ ಯೋಜನಾ ವೆಚ್ಚದ ಮೇಲೆ ಬ್ಯಾಂಕುಗಳಿಂದ ಸಾಲ ಪಡೆದು, ಸಾಲದ ಮೇಲೆ ಬ್ಯಾಂಕುಗಳು ವಿಧಿಸುವ ಶೇ.7 ಕ್ಕಿಂತ ಹೆಚ್ಚಿನ ಬಡ್ಡಿಯ ಮೇಲೆ ಗರಿಷ್ಠ ಶೇ.5 ಅಥವಾ ರೂ. 10,000/– ವರೆಗೆ ಬಡ್ಡಿ ಸಹಾಯಧನಕ್ಕಾಗಿ ಅರ್ಹ ಫಲಾನುಭವಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 5 ರೊಳಗೆ ನಿಗದಿತ ನಮೂನೆಯನ್ನು ಕಚೇರಿಯಿಂದ ಪಡೆದು ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ಅರ್ಜಿಗಳನ್ನು ನಿಗದಿತ ಬ್ಯಾಂಕ್‌ನ ಬಡ್ಡಿ ಕ್ಲೇಮ್‌ನೊಂದಿಗೆ ಅಕ್ಟೋಬರ್ 9 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು (ಗ್ರಾ.ಕೈ), ಗ್ರಾಮೀಣ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ್, ಕೊಪ್ಪಳ ಕಚೇರಿ ವಿಳಾಸ: ನಗರಸಭೆ ಎದುರುಗಡೆ, ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ದೂರವಾಣಿ ಸಂಖ್ಯೆ: 08539–230980 ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

# ಖಾಸಗಿ ಶಾಲೆಗಳಿಗೆ ಅನುದಾನಕ್ಕೆ ಆಗ್ರಹಿಸಿ: ದಿ,9 ರಿಂದ ಅನಿರ್ದಿಷ್ಟಾವಧಿ ಧರಣಿ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಕಲ್ಯಾಣ ಕರ್ನಾಟಕ ಭಾಗದ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಕೆ.ಕೆ. ಆರ್.ಡಿ.ಬಿ ಅನುದಾನದಲ್ಲಿ ನೆರವು ಕಲ್ಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇ–ರಿಕೆಗೆ ಆಗ್ರಹಿಸಿ ಸೆಪ್ಟೆಂಬರ್ 9 ರಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ‘ಕಲ್ಯಾಣ ಕರ್ನಾಟಕ ವಿಭಾಗೀಯ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷರಾದ ಸುನಿಲ್ ಕುಮಾರ್ ಹುಡುಗಿ ಎಚ್ಚರಿಸಿದ್ದಾರೆ,**

ಅವರು ಶುಕ್ರವಾರ ನಗರದಲ್ಲಿರುವ ಪತ್ರಿಕಾ ಭವನದಲ್ಲಿ ಏರ್ಪಡಿಸಿದ ಸುದ್ದಿಗೋಷ್ಠಿಯಲ್ಲಿ ಮಾಧ್ಯಮದೊಂದಿಗೆ ಮಾತನಾಡುತ್ತ ಕಲ್ಯಾಣ ಕರ್ನಾಟಕಕ್ಕೆ 371(ಜೆ) ವಿಶೇಷ ಸ್ಥಾನಮಾನ ದೊರೆತು 13 ವರ್ಷಗಳು ಗತಿಸಿದರೂ ರಾಜಕಾರಣಿಗಳು ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದಾಗಿ ಶಿಕ್ಷಣ ಸಂಸ್ಥೆಗಳಿಗೆ




ಸಿಗಬೇಕಾದ ಸೂಕ್ತ ಸೌಲಭ್ಯಗಳು ದೊರೆತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು, ಮುಂದುವರೆದು ಮಾತನಾಡಿ ಪ್ರಮುಖ ಬೇಡಿಕೆ ಗಳಾದ

> * ಸರ್ಕಾರಿ ಶಾಲೆಗಳ ಮಾದರಿ ಸೌಲಭ್ಯ: ಕೆ.ಕೆ.ಆರ್.ಡಿ.ಬಿ ಮಂಡಳಿಯಿಂದ ಸರ್ಕಾರಿ ಶಾಲೆಗಳಿಗೆ ನೀಡುತ್ತಿರುವ ಎಲ್ಲ ಸೌಲಭ್ಯ ಹಾಗೂ ವಿವಿಧ ಅನುದಾನಗಳನ್ನು ಖಾಸಗಿ ಅನುದಾನ ರಹಿತ ಶಾಲೆಗಳಿಗೂ ವಿಸ್ತರಿಸಬೇಕು.
> * ವೇತನಾನುದಾನ: ಮಹಾರಾಷ್ಟ್ರ ಮಾದ–ರಿಯಲ್ಲಿ 1995ರ ನಂತರ ಆರಂಭವಾದ ಖಾಸಗಿ ಶಾಲೆಗಳಿಗೆ ವೇತನಾನುದಾನ ನೀಡಬೇಕು.
> * ಆರ್‌ಟಿಇ ಪ್ರವೇಶ & ಶುಲ್ಕ: 2012ರ ನಿಯಮದಂತೆ ಆರ್‌ಟಿಇ ಅಡಿಯಲ್ಲಿ ಬಡ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಾವಕಾಶ ಕಲ್ಪಿಸಬೇಕು.
> * ಶಾಲಾ ನವೀಕರಣ ಸರಳೀಕರಣ: ಖಾಸಗಿ ಶಾಲೆಗಳ ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಸರಳಗೊಳಿಸಬೇಕು.
> * ಉಚಿತ ವಿದ್ಯುತ್ & ತೆರಿಗೆ ವಿನಾಯಿತಿ: ಸರ್ಕಾರಿ ಶಾಲೆಗಳಂತೆ ಖಾಸಗಿ ಶಾಲೆಗಳಿಗೂ ಉಚಿತ ವಿದ್ಯುತ್ ಒದಗಿಸಬೇಕು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಾಲೆಗಳಿಗೆ ಆಸ್ತಿ ತೆರಿಗೆ ವಿನಾಯಿತಿ ನೀಡಬೇಕು.

ಇದೇ ವೇಳೆ, ಸರ್ಕಾರಿ ಶಾಲಾ ಮಕ್ಕಳಿಗೆ ಮಾತ್ರ ಪ್ರತ್ಯೇಕ ಮೀಸಲಾತಿ ನೀಡುವುದಾಗಿ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆಗೆ ಒಕ್ಕೂಟ ವಿರೋಧ ವ್ಯಕ್ತಪಡಿಸಿದ್ದು, ಇದು ಗ್ರಾಮೀಣ ಭಾಗದ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ಮಾಡುವ ಅನ್ಯಾಯ ಎಂದು ತಿಳಿಸಿದೆ.

ತಮ್ಮ ಬೇಡಿಕೆಗಳನ್ನು ಸರ್ಕಾರ ತಕ್ಷಣವೇ ಈಡೇರಿಸದಿದ್ದರೆ, ಸೆಪ್ಟೆಂಬರ್ 9ರ ಬುಧವಾರದಿಂದ ವಚನ ಹಾಗೂ ತತ್ವಪದ ಗಾಯನದ ಮೂಲಕ ವಿಶಿಷ್ಟ ರೀತಿಯಲ್ಲಿ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಆರಂಭಿಸುವುದಾಗಿ ಒಕ್ಕೂಟದ ಅಧ್ಯಕ್ಷರಾದ ಸುನೀಲಕುಮಾರ ಆರ್. ಹುಡಗಿ ಪತ್ರಿಕಾಗೋಷ್ಠಿಯಲ್ಲಿ ಸರಕಾರಕ್ಕೆ ಎಚ್ಚರಿಸಿದ್ದಾರೆ. ಸೇರಿದಂತೆ ಅನೇಕರು ಉಪಸ್ಥಿತರಿದ್ದರು,

# ಎಚ್‌ಐವಿ/ಏಡ್ಸ್ ಜಾಗೃತಿಗಾಗಿ 5 ಕಿ.ಮೀ. ರೆಡ್‌ರಿಬ್ಬನ್ ಮ್ಯಾರಥಾನ್

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಯುವಜನರಲ್ಲಿ ಎಚ್‌ಐವಿ/ಏಡ್ಸ್ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾ ಮಟ್ಟದ 5 ಕಿ.ಮೀ. ರೆಡ್–ರಿಬ್ಬನ್ ಮ್ಯಾರಥಾನ್ ಸ್ಪರ್ಧೆಯನ್ನು ಸೆಪ್ಟೆಂಬರ್ 3ರಂದು ಕೊಪ್ಪಳದಲ್ಲಿ ಆಯೋಜಿಸಲಾಗಿತ್ತು. ಇದರಲ್ಲಿ ವಿವಿಧ ಕಾಲೇಜುಗಳ ಒಟ್ಟು 203 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.**

ಮ್ಯಾರಥಾನ್‌ಗೆ ಕೊಪ್ಪಳ ಉಪವಿಭಾಗಾಧಿಕಾರಿ ಮೆಹಬೂಬ ಜಿಲಾನಿ ಖುರೇಶಿ ಹಾಗೂ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ. ಶಶಿಧರ ಎ. ಅವರು ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಉಪವಿಭಾಗಾಧಿಕಾರಿಗಳು, ಮಾತನಾಡಿ, ಮಾನವ ಜೀವನ ಅತ್ಯಮೂಲ್ಯವಾಗಿದ್ದು, ಯುವಜನರು ಕ್ರೀಡೆ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಎಚ್‌ಐವಿ/ಏಡ್ಸ್ ಕುರಿತು ಸಮಗ್ರ ಮಾಹಿತಿ ಹೊಂದಬೇಕು. ಸೋಂಕು ಹರಡದಂತೆ ಮುನ್ನೆಚ್ಚರಿಕೆ ವಹಿಸಿ ಆರೋಗ್ಯಕರ ಹಾಗೂ ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿಗಳು ಮಾತನಾಡಿ, ಯುವಜನರಲ್ಲಿ ಎಚ್‌ಐವಿ/ಏಡ್ಸ್ ಕುರಿತು ಜಾಗೃತಿ ಮೂಡಿಸಿ ಅವರನ್ನು ಸೋಂಕಿನಿಂದ ರಕ್ಷಿಸುವ ಉದ್ದೇಶದಿಂದ ಮ್ಯಾರಥಾನ್ ಆಯೋಜಿಸಲಾಗಿದೆ. ಯುವಜನರು ತಮ್ಮ



ನಡವಳಿಕೆಗಳ ಮೇಲೆ ನಿಯಂತ್ರಣ ಹೊಂದಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ದೂರವಿದ್ದು, ಎಚ್‌ಐವಿ/ಏಡ್ಸ್‌ನಂತಹ ಸೋಂಕುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು ಎಂದರು.

ಎಚ್‌ಐವಿ ಹರಡುವಿಕೆ, ಲಕ್ಷಣಗಳು ಹಾಗೂ ಲಭ್ಯವಿರುವ ಚಿಕಿತ್ಸಾ ಸೌಲಭ್ಯಗಳ ಕುರಿತು ಮಾಹಿತಿ ನೀಡಿ, ಈ ಮಾಹಿತಿಯನ್ನು ಇತರರಿಗೂ ತಲುಪಿಸುವಂತೆ ಮನವಿ ಮಾಡಿದರು. ಆಪ್ತಸಮಾಲೋಚಕ ಅಮರೇಶ್ ಮಾತನಾಡಿ, ಎಚ್‌ಐವಿ ಅಪಾಯದ ಮೌಲ್ಯಮಾಪನ ಹಾಗೂ ಪರೀಕ್ಷಾ ಸೌಲಭ್ಯಗಳ ಕು–ರಿತು ಆನ್‌ಲೈನ್‌ನಲ್ಲಿ ಮಾಹಿತಿ ಪಡೆಯಬಹುದಾಗಿದೆ. ಅಪಾಯದ ಮಟ್ಟವನ್ನು ತಿಳಿದುಕೊಳ್ಳಲು ಹಾಗೂ ಎಚ್‌ಐವಿ, ಎಸ್‌ಟಿಐ ಕುರಿತು ಮಾಹಿತಿ ಪಡೆಯಲು ಲಭ್ಯವಿರುವ ಮಾರ್ಗಗಳನ್ನು ಬಳಸಿಕೊಳ್ಳಬೇಕು. ಈ ಪ್ರಕ್ರಿಯೆ ಗೌಪ್ಯತೆಯಿಂದ ಕೂಡಿದ್ದು, ಭಯಪಡದೆ ಅಗತ್ಯವಿದ್ದಲ್ಲಿ ಪರೀಕ್ಷೆ ಮಾಡಿಸಿಕೊಳ್ಳುವಂತೆ ತಿಳಿಸಿದರು.

**ಮ್ಯಾರಥಾನ್ ವಿಜೇತರು:** ಪುರುಷರ ವಿಭಾಗದಲ್ಲಿ ಹಿರೇಬೆಣಕನಕಲ್‌ನ ಎಂ.ಎಂ.ಡಿ.ಆರ್.ಎಸ್. ಪದವಿ ಪೂರ್ವ ಕಾಲೇಜಿನ ಸಂತೋಷ ಪ್ರಥಮ ಸ್ಥಾನ ಪಡೆದು ರೂ. 5,000 ಬಹುಮಾನ ಪಡೆದರು. ಇರಕಲಗಡ ಪದವಿಪೂರ್ವ ಕಾಲೇಜಿನ ಮಾರುತಿ ದ್ವಿತೀಯ ಸ್ಥಾನ (ರೂ. 3,500) ಹಾಗೂ ತಾವರಗೇರಾದ ಎಸ್.ಎಂ.ವಿ. ಪದವಿ ಪೂರ್ವ ಕಾಲೇಜಿನ ಶ್ರೀನಿವಾಸ ತೃತೀಯ ಸ್ಥಾನ (ರೂ. 2,500) ಪಡೆದರು. ಅದರಂತೆ ಮಹಿಳೆಯರ ವಿಭಾಗದಲ್ಲಿ ಹಿರೇಬೆಣಕನಕಲ್‌ನ ಎಂ.ಎಂ.ಡಿ.ಆರ್.ಎಸ್. ಪದವಿ ಪೂರ್ವ ಕಾಲೇಜಿನ ಹೀನಾ ಕೌಸರ್

> “.ಯುವಜನರು ತಮ್ಮ ನಡವಳಿಕೆಗಳ ಮೇಲೆ ನಿಯಂತ್ರಣ ಹೊಂದಿ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ದೂರವಿದ್ದು, ಎಚ್‌ಐವಿ/ಏಡ್ಸ್‌ನಂತಹ ಸೋಂಕುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು.”

ಪ್ರಥಮ ಸ್ಥಾನ ಪಡೆದು ರೂ. 5,000 ಬಹುಮಾನ ಪಡೆದರು. ಕೊಪ್ಪಳದ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜಿನ ಪಾರ್ವತಿ ದ್ವಿತೀಯ ಸ್ಥಾನ (ರೂ. 3,500) ಹಾಗೂ ಹಿರೇಬೆಣ–ಕನಕಲ್‌ನ ಎಂ.ಎಂ.ಡಿ.ಆರ್.ಎಸ್. ಪದವಿ ಪೂರ್ವ ಕಾಲೇಜಿನ ರೇಖಾ ತೃತೀಯ ಸ್ಥಾನ (ರೂ. 2,500) ಪಡೆದರು. ಪುರುಷ ಹಾಗೂ ಮಹಿಳಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲೆಯನ್ನು ಪ್ರತಿನಿಧಿಸಲಿದ್ದಾರೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ದೈಹಿಕ ನಿರ್ದೇಶಕರಾದ ಡಾ. ಮಂಜುನಾಥ ಆರೆಂಟನೂರು, ಜೈರಾಮ್ ಮರಡಿತೋಟ, ಡಾ. ಶೋಭಾ ಎಸ್.ಕೆ., ಡಾ. ವಿನೋದ ಮುದಿಬಸನಗೌಡ, ಡಾ. ಅನಿತಾ ಸೇರಿದಂತೆ ಡ್ಯಾಪ್ಕೋ ಸಿಬ್ಬಂದಿ, ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

1ನೇ ಪುಟದಿಂದ

**ಓವರ್‌ಬ್ರಿಡ್ಜ್ ನಿರ್ಮಾಣಕ್ಕೆ ಕ್ರಮದ ಭರವಸೆ :** ತಳಕಲ್ ಭಾಗದ ರಾಷ್ಟ್ರೀಯ ಹೆದ್ದಾರಿಯಲ್ಲಿ ಪದೇಪದೇ ಅಪಘಾತಗಳು ಸಂಭವಿಸುತ್ತಿರುವ ಬಗ್ಗೆ ಗಮನಸೆಳೆದ ಅವರು, ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಮುಂದಿನ ದಿನಗಳಲ್ಲಿ ಓವರ್‌ಬ್ರಿಡ್ಜ್ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

**ಗ್ರಾಮೀಣ ಜನರಿಗೆ ಸೇವೆಗಳು ಇನ್ನಷ್ಟು ಸುಲಭ: ಉದಯ ರಾಯರಡ್ಡಿ:**

ನಂತರ ಉದ್ಯಮಿ ಉದಯ ರಾಯರಡ್ಡಿ ಮಾತನಾಡಿ, ತಳಕಲ್‌ನಲ್ಲಿ ನೂತನ ಉಪ ಅಂಚೆ ಕಚೇರಿ ಆರಂಭವಾಗಿರುವುದು ಗ್ರಾಮೀಣ ಭಾಗದ ಜನರಿಗೆ ಅತ್ಯಂತ ಅನುಕೂಲಕರವಾಗಿದೆ. ಇದರಿಂದ ತಳಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರಿಗೆ ವಿವಿಧ ಅಂಚೆ ಸೇವೆಗಳು ಸ್ಥಳೀಯವಾಗಿಯೇ ಲಭ್ಯವಾಗಲಿವೆ ಎಂದು ಹೇಳಿದರು .

ಇಲ್ಲಿನ ಗುರುಹಿರಿಯರು ಹಾಗೂ ಸಾರ್ವಜನಿಕರ ಅವಿರತ ಪ್ರಯತ್ನದ ಫಲವಾಗಿ ಇಂದು ಉಪ ಅಂಚೆ ಕಚೇರಿ ಆರಂಭವಾಗಿದೆ. ಈ ಸೌಲಭ್ಯವನ್ನು ಸಾರ್ವಜನಿಕರು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು.

ಭಾರತೀಯ ಅಂಚೆ ಇಲಾಖೆಯು ದೇಶದ ಜನರಿಗೆ ದೀರ್ಘಕಾಲದಿಂದ ವಿಶ್ವಾಸಾರ್ಹ ಸೇವೆ ನೀಡುತ್ತಾ ಬಂದಿದೆ. ಒಂದು ಕಾಲದಲ್ಲಿ ಕುಟುಂಬಗಳ ನಡುವಿನ ಸಂಪರ್ಕದ ಪ್ರಮುಖ ಕೊಂಡಿಯಾಗಿದ್ದ ಅಂಚೆ ಕಚೇರಿಗಳು ಇಂದು ಆಧುನಿಕ ತಂತ್ರಜ್ಞಾನಕ್ಕೆ ಅನುಗುಣವಾಗಿ ಹಲವು ಸೇವೆಗಳನ್ನು ಒದಗಿಸುತ್ತಿವೆ ಎಂದು ತಿಳಿಸಿದರು. ಮನಿ ಆರ್ಡರ್, ಸ್ಪೀಡ್ ಪೋಸ್ಟ್ ಸೇರಿದಂತೆ ಹಲವು ಪ್ರಮುಖ ಸೇವೆಗಳು ಅಂಚೆ ಕಚೇರಿಗಳ ಮೂಲಕ ಸಾರ್ವಜನಿಕರಿಗೆ ದೊರೆಯುತ್ತಿವೆ. ಗ್ರಾಮೀಣ ಪ್ರದೇಶದ ಜನರಿಗೆ ವಿವಿಧ ಸೇವೆಗಳನ್ನು ತಲುಪಿಸುವಲ್ಲಿ ಅಂಚೆ ಕಚೇರಿಗಳು ಮಹತ್ವದ ಪಾತ್ರ ವಹಿಸುತ್ತಿವೆ ಎಂದರು.

ತಳಕಲ್‌ನಲ್ಲಿ ಉಪ ಅಂಚೆ ಕಚೇರಿ ಆರಂಭವಾಗಲು ಹಲವರು ಶ್ರಮಿಸಿದ್ದಾರೆ. ವಿಶೇಷವಾಗಿ ಮಾಜಿ ಸಂಸದ ಸಂಗಣ್ಣ ಕರಡಿ ಅವರು ಈ ಕಾರ್ಯಕ್ಕೆ ಸಾಕಷ್ಟು ಪ್ರಯತ್ನ ಹಾಗೂ ಸಹಕಾರ ನೀಡಿದ್ದಾರೆ. ಅವರ ಶ್ರಮವನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕು ಎಂದು ಹೇಳಿದರು.

ನೂತನ ಉಪ ಅಂಚೆ ಕಚೇರಿಯಿಂದ ತಳಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಅಂಚೆ ಸೇವೆ ಪಡೆಯಲು ದೂರದ ಪ್ರದೇಶಗಳಿಗೆ ತೆರಳುವ ಅಗತ್ಯ ಕಡಿಮೆಯಾಗಲಿದ್ದು, ಸಾರ್ವಜನಿಕರು ಅಂಚೆ ಇಲಾಖೆಯ ಎಲ್ಲ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಂತರ ಜಿ.ವಿ. ಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತಿಮ್ಮಣ್ಣ ಚೌಡಿ ಮಾತನಾಡಿದರು. ಈ ಸಂದರ್ಭದಲ್ಲಿ ಅಂಚೆ ಕಚೇರಿ ಅಧಿಕಾರಿಗಳಾದ ಆನಂದ ಕರೂರ, ನಾಗರಾಜ ಪಾಟೀಲ್, ಪಿಡಿಒ ವೀರನಗೌಡ, ಮುಖಂಡರಾದ ವೀರನಗೌಡ ಬಳೂಟಗಿ, ವೀರೇಶ ಬಿಸರಳ್ಳಿ, ಸಿರಾಜುದ್ದೀನ್ ಕೊಪ್ಪಳ, ಮಲ್ಲಿಕಾರ್ಜುನ ಮೇಟಿಗೌಡ್ರ, ಸೋಮರಡ್ಡಿ ಭೀಮರೆಡ್ಡಿ, ಮಹಾದೇವಪ್ಪ ಮೂಲಿಮನಿ, ಸುರೇಶಗೌಡ್ರ, ಹನುಮಂತಗೌಡ ಚೆಂಡೂರ, ಶಿವಕುಮಾರ ಆದಾಪೂರ, ಹನುಮಂತಪ್ಪ ಹೈತಾಪೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮಹ್ಮದ್ ರಫಿ ಪ್ರಾರ್ಥಿಸಿದರು.




## 'ವಚನಾಮೃತ'

ಹಸಿದಿರಲು ತನುವು ಬಸಿಯದಿರಿ
ರಸವನೆಂತು ಕತ್ತಲಾಟಕೆ ಕೊಳಚೆ
ಬಟ್ಟೆಯೊಳ್ ಸಾಗದಿರಿ!.
ಕಾಲಕೆ ಮಾಯೆ ಅಡರಿ
ಕೃಶಗೊಳಲು ಕಾಯ ಬಸಿದುದೆಲ್ಲವ
ಹಿಂಪಡೆಯಲಾದಿತೆ ಸತ್ಯವಾಣಿ!!.



ವಾಣಿ ಭಂಡಾರಿ.

# ವಸತಿ ನಿಲಯದ ಬಾಲಕರಿಗೆ ಸ್ವಚ್ಛತೆ, ಆರೋಗ್ಯದ ಅರಿವು

**ಅ.ಶ. ಸುದ್ದಿ ಕೊಪ್ಪಳ**

ಕೊಪ್ಪಳ ವೈಯಕ್ತಿಕ ಸ್ವಚ್ಛತೆ ಹಾಗೂ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಹೊಂದಲು ಸಾಧ್ಯ ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಗಂಗಮ್ಮ ಕೆ. ಹೇಳಿದರು.

ಕೊಪ್ಪಳ ನಗರ ಪ್ರದೇಶದ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಕಚೇರಿ, ತಾಲೂಕಾ ಆರೋಗ್ಯಾಧಿಕಾರಿಗಳ ಕಚೇರಿ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಸ್ವಚ್ಛತೆ ಮತ್ತು ಆರೋಗ್ಯ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ವೈಯಕ್ತಿಕ ಸ್ವಚ್ಛತೆಯು ದೇಹ ಹಾಗೂ ಮನಸ್ಸನ್ನು ಆರೋಗ್ಯಕರವಾಗಿಡಲು ಅತ್ಯಗತ್ಯ. ಪ್ರತಿದಿನ ಸ್ನಾನ ಮಾಡುವುದು, ಹಲ್ಲುಜ್ಜುವುದು, ಉಗುರುಗಳನ್ನು ಕತ್ತರಿಸುವುದು, ಸ್ವಚ್ಛ ಬಟ್ಟೆ ಧರಿಸುವುದು



ಹಾಗೂ ಮನೆ, ಶಾಲೆ, ವಸತಿ ನಿಲಯ ಮತ್ತು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವ ಅಭ್ಯಾಸ ಬೆಳೆಸಿಕೊಳ್ಳಬೇಕು. ಕಸವನ್ನು ಕಸದ ಬುಟ್ಟಿಗೆ ಹಾಕಬೇಕು. ಶುದ್ಧ ನೀರನ್ನು ಕುಡಿಯುವುದರ ಜೊತೆಗೆ ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ ಎಂದು ತಿಳಿಸಿದರು. ಅಪರಿಶುದ್ಧ ವಾತಾವರಣವು ರೋಗಾಣುಗಳ ಬೆಳವಣಿಗೆಗೆ ಕಾರಣವಾಗುತ್ತದೆ. ವೈಯಕ್ತಿಕ ನೈರ್ಮಲ್ಯ ಕಾಪಾಡಿಕೊಳ್ಳದಿದ್ದರೆ ಬ್ಯಾಕ್ಟೀರಿಯಾ ಹಾಗೂ ವೈರಸ್‌ಗಳಿಂದ ಭೇದಿ, ಟೈಫಾಯಿಡ್ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳು ಹರಡುವ ಸಾಧ್ಯತೆ ಇದೆ. ಆದ್ದರಿಂದ ಪರಿಸರ ಸ್ವಚ್ಛತೆಯನ್ನು ಕಾಪಾಡುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು. ಊಟ ಮಾಡುವ ಮುನ್ನ ಹಾಗೂ ಶೌಚಾಲಯ ಬಳಕೆಯ ನಂತರ ಸಾಬೂನು ಮತ್ತು ಸ್ವಚ್ಛ ನೀರಿನಿಂದ ಕನಿಷ್ಠ 20ರಿಂದ 40 ಸೆಕೆಂಡುಗಳ ಕಾಲ ಕೈಗಳನ್ನು ಸರಿಯಾಗಿ ತೊಳೆಯುವ ಮೂಲಕ ಸೋಂಕುಗಳ ಹರಡುವಿಕೆಯನ್ನು ತಡೆಯಬಹುದು ಎಂದು ಗಂಗಮ್ಮ ಕೆ. ವಿದ್ಯಾರ್ಥಿಗಳಿಗೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಸತಿ ನಿಲಯದ ಪಾಲಕರಾದ ಮಂಜುಳಾ ವಾಲಿ ಮಾತನಾಡಿ, ಆರೋಗ್ಯ ಇಲಾಖೆಯ ಇಂತಹ ಅರಿವು ಕಾರ್ಯಕ್ರಮಗಳು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದ್ದು, ಇದರ ಪ್ರಯೋಜನ ಪಡೆದು ತಮ್ಮ ಗ್ರಾಮ ಹಾಗೂ ವಾರ್ಡ್‌ಗಳಲ್ಲಿ ಸಾರ್ವಜನಿಕರಿಗೂ ಸ್ವಚ್ಛತೆ ಮತ್ತು ಆರೋಗ್ಯದ ಕುರಿತು ಅರಿವು ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಆರ್‌ಬಿಎಸ್‌ಕೆ ಕಾರ್ಯಕ್ರಮದ ನೇತ್ರಾಧಿಕಾರಿ ವಿನೋದ್, ವಸತಿ ನಿಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

# ಜನಾಕ್ರೋಶಕ್ಕೆ ಬೆಚ್ಚಿಬಿದ್ದು ಮತ್ತೊಮ್ಮೆ ಮಂಡಿಯೂರಿದ ಡಿಕೆಶಿ ಸರ್ಕಾರ: 15

**ಅ.ಶ. ಸುದ್ದಿ ಕೊಪ್ಪಳ**

ಬೆಂಗಳೂರು: ಕಾಂಗ್ರೆಸ್? ಸರ್ಕಾರ ಉದ್ಯಾನಗಳಲ್ಲಿ ಶೇ.5ರಷ್ಟು ಭೂಮಿಯನ್ನು ಮೂಲಸೌಕರ್ಯಕ್ಕೆ ಬಳಸುವ ಮಸೂದೆ ಹಿಂಪಡೆದಿರುವುದು ಬಿಜೆಪಿಯ ಹೋರಾಟಕ್ಕೆ ಸಿಕ್ಕ ಮತ್ತೊಂದು ಜಯ. ಮುಂದೆಯೂ ಉದ್ಯಾನಗಳನ್ನು ಬಳಸುವುದಕ್ಕೆ ಬಿಜೆಪಿ ಅವಕಾಶ ನೀಡುವುದಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್?.ಅಶೋಕ್? ಹೇಳಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾರ್ಕ್ ಉಳಿಸಿ ಬೆಂಗಳೂರು ರಕ್ಷಿಸಿ ಎಂಬ ಅಭಿಯಾನ ಮಾಡುವುದಾಗಿ ಬಿಜೆಪಿ ವತಿಯಿಂದ ಘೋಷಣೆ ಮಾಡಲಾಗಿತ್ತು. ಈಗ ರಾಜ್ಯ ಕಾಂಗ್ರೆಸ್?? ಸರ್ಕಾರ ಉದ್ಯಾನಗಳಲ್ಲಿ ಶೇ.5ರಷ್ಟು ಭೂಮಿಯನ್ನು ಮೂಲಸೌಕರ್ಯಕ್ಕೆ ಬಳಸುವ ಮಸೂದೆ ಹಿಂಪಡೆದಿದೆ. ಈ ಮೂಲಕ, ಒಂದೇ ತಿಂಗಳಲ್ಲಿ ಬಿಜೆಪಿಗೆ ಎರಡು ಜಯ ಸಿಕ್ಕಿದೆ. ಇದು ಶಾರ್ಟ್ ಟರ್ಮ್ ಮುಖ್ಯಮಂತ್ರಿ ಮತ್ತು ಯುಟರ್ನ್ ಸರ್ಕಾರ ಎಂದಿದ್ದಾರೆ.

ಈ ಮೊದಲು ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ಮಾಡಿದ ಬಿ. ನಾಗೇಂದ್ರ ಅವರ ರಾಜೀನಾಮೆ ಪಡೆಯಲಾಗಿತ್ತು. ಈಗ ಉದ್ಯಾನಗಳನ್ನು ವಾಣಿಜ್ಯೀಕರಣ ಮಾಡಲು ಹೊರಟಿದ್ದ ಸರ್ಕಾರ, ಬಿಜೆಪಿಯ ಹೋರಾಟದ ಎಚ್ಚರಿಕೆಯಿಂದ ಮಸೂದೆಯನ್ನು ವಾಪಸ್ ಪಡೆದಿದೆ. ಅಧಿವೇಶನದಲ್ಲಿ ಈ ಬಗ್ಗೆ ಚರ್ಚಿಸುವ ಅಗತ್ಯವೇ ಇಲ್ಲ. ಉದ್ಯಾನಗಳ ಜಾಗ ನುಂಗುವುದಕ್ಕೆ ನಾವು ಅವಕಾಶ ನೀಡುವುದಿಲ್ಲ. ಇದು ಬೆಂಗಳೂರನ್ನು ಪ್ರೀತಿಸುವ, ಗಾರ್ಡನ್ ಸಿಟಿ ಉಳಿಸುವ ಜನರಿಗೆ ಸಿಕ್ಕಿರುವ ಜಯ ಎಂದರು.

ಪ್ರತಿಯೊಂದರಲ್ಲೂ ಯುಟರ್ನ್ ಮಾಡುವ ಮುಖ್ಯಮಂತ್ರಿಗಳಿಗೆ ಇಂತಹ ಸಲಹೆಗಳನ್ನು ಯಾರು ನೀಡುತ್ತಿದ್ದಾರೆ ಉದ್ಯಮಿ ಗೌತಮ್ ಅದಾನಿಗೆ ಸುರಂಗ ರಸ್ತೆ ಯೋಜನೆ ನೀಡಲು ಉದ್ಯಾನಗಳನ್ನು ನಾಶ ಮಾಡಲು ಮುಂದಾಗಿದ್ದರು. ಬೆಂಗಳೂರಿನಲ್ಲಿ 1,523 ಉದ್ಯಾನಗಳಿವೆ. 240



ಎಕರೆ ವಿಸ್ತೀರ್ಣ ಇರುವ ಲಾಲ್‌ಬಾಗ್‌ನಲ್ಲಿ ಶೇ.5ರಷ್ಟು ಭೂಮಿ ಎಂದರೆ 12 ಎಕರೆಯಾಗುತ್ತದೆ.

192 ಎಕರೆ ವಿಸ್ತೀರ್ಣ ಇರುವ ಕಬ್ಬನ್ ಉದ್ಯಾನದಲ್ಲಿ ಶೇ.5ರಷ್ಟು ಭೂಮಿ ಎಂದರೆ 10 ಎಕರೆಯಾಗುತ್ತದೆ. ಲಾಲ್‌ಬಾಗ್ ನಿರ್ಮಿಸಿದ ಪುಣ್ಯಾತ್ಮರು ಬೆಂಗಳೂರು ಉದ್ಯಾನ ನಗರಿಯಾಗಬೇಕೆಂಬ ಗುರಿ ಇಟ್ಟುಕೊಂಡಿದ್ದರು. ಆಗಿನ ಕಾಲದ ಆಡಳಿತಗಾರರಿಗೆ ಹಸಿರು ಉಳಿಸುವ ಜ್ಞಾನವಿತ್ತು. ಆದರೆ ಈಗಿನ ಮುಖ್ಯಮಂತ್ರಿಗೆ ಹಸಿರು ಕಾಣಿಸದೆ ಕೇವಲ ರಿಯಲ್ ಎಸ್ಟೇಟ್ ಮಾತ್ರ ಕಾಣುತ್ತಿದೆ ಎಂದು ಟೀಕಿಸಿದರು.

ಈ ಕ್ರಮ ಮುಂದಿನ ಪೀಳಿಗೆಗೆ ಮಾರಕವಾಗುತ್ತಿತ್ತು. ಈಗ ಶೇ.5ರಷ್ಟು ಇರುವ ಭೂ ಬಳಕೆ ಮುಂದೆ ಶೇ.10 ಆಗುತ್ತಿತ್ತು. 1975ರಲ್ಲಾದ ಉದ್ಯಾನಗಳ ಸಂರಕ್ಷಣೆ ಅಧಿನಿಯಮದಲ್ಲಿ ಹಸಿರು ಹೆಚ್ಚಬೇಕು, ರಾಜ್ಯದಲ್ಲಿ ಶೇ.30ಕ್ಕಿಂತ ಅಧಿಕ ಹಸಿರು ಇರಬೇಕು ಎಂಬ ಉದ್ದೇಶವಿದೆ. ಹಸಿರು ಕಡಿಮೆಯಾದಂತೆ ನಗರದಲ್ಲಿ ಪ್ರವಾಹ ಹೆಚ್ಚಿದೆ. ಎಚ್‌ಎಸ್‌ಆರ್ ಲೇಔಟ್, ಜಯನಗರ, ಹೆಬ್ಬಾಳ ಮೊದಲಾದ ಪ್ರದೇಶಗಳು ಮಳೆಯಿಂದ ಮುಳುಗುತ್ತಿದೆ. ಸುರಂಗ ರಸ್ತೆ ಯೋಜನೆ ಜಾರಿಯಾದರೆ ಇಡೀ ನಗರ ಮುಳುಗಡೆಯಾಗಲಿದೆ. ರಾಜಕಾಲುವೆಯ ಹೂಳು ತೆಗೆಯದೆ, ಒಳಚರಂಡಿ ವ್ಯವಸ್ಥೆ ಸರಿಪಡಿಸದೆ ಸುರಂಗ ರಸ್ತೆ ಯೋಜನೆ ಜಾರಿ ಮಾಡಲಾಗುತ್ತಿದೆ. ಇದರಿಂದಾಗಿ ರಸ್ತೆಗಳು ಸ್ಟೋರೇಜ್ ಟ್ಯಾಂಕ್‌ಗಳಾಗಲಿವೆ ಎಂದು ತಿಳಿಸಿದರು.

ಉದ್ಯಾನಗಳನ್ನು ಇನ್ನಷ್ಟು ಹೆಚ್ಚಿಸುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ ಮಾಡಬೇಕಿತ್ತು. ಅದನ್ನು ಬಿಟ್ಟು ಉದ್ಯಾನಗಳನ್ನು, ಮರಗಳನ್ನು ನಾಶ ಮಾಡುತ್ತಿದ್ದಾರೆ. ಬೆಂಗಳೂರಿನ ಜನರು ಇದರಿಂದ ರೊಚ್ಚಿಗೆದ್ದಿದ್ದಾರೆ. ನಾವು ಹೋರಾಟವನ್ನು ಘೋಷಣೆ ಮಾಡಿದ್ದಕ್ಕೆ ಜನರಿಂದ ಬೆಂಬಲ ಸಿಕ್ಕಿದೆ. ಎಲ್ಲ ಶಾಸಕರು, ಮಾಜಿ ಕಾರ್ಪೊರೇಟರ್‌ಗಳು ಉದ್ಯಾನಗಳಲ್ಲಿ ಪ್ರತಿಭಟನೆಗೆ ಸಜ್ಜಾಗಿದ್ದರು. 5 ಲಕ್ಷ ಸಹಿ ಸಂಗ್ರಹದ ಗುರಿ ಇತ್ತು. ಯೋಗ ಕ್ಲಬ್, ನಗೆಕೂಟಗಳನ್ನು ಸಂಪರ್ಕಿಸಲಾಗಿತ್ತು. ಇದು ದೊಡ್ಡ ಹೋರಾಟವಾಗುತ್ತಿತ್ತು. ಇದರಿಂದ ಬೆದರಿದ ಸರ್ಕಾರ ಮಸೂದೆ ಹಿಂಪಡೆದಿದೆ. ಇನ್ನು ಮುಂದೆಯೂ ಮತ್ತೆ ಈ ಮಸೂದೆ ತರಬಾರದು ಎಂದರು.

ಬೆಂಗಳೂರು ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ಹಸಿರಿಗೆ ಕತ್ತರಿ ಹಾಕುವ ಯಾವುದೇ ಪ್ರಯತ್ನಕ್ಕೆ ಬಿಜೆಪಿ ಗೋಡೆಯಂತೆ ನಿಲ್ಲುತ್ತದೆ. ಇದು ಬಿಜೆಪಿಯ ಹೋರಾಟದ ಭರ್ಜರಿ ಗೆಲುವು. ಇದು ಬೆಂಗಳೂರಿನ ಜನರ ಗೆಲುವು. ಇದು ನಮ್ಮ ಹೆಮ್ಮೆಯ ಉದ್ಯಾನ ನಗರಿಯ ಹಸಿರಿನ ಗೆಲುವು ಎಂದು ಬರೆದುಕೊಂಡಿದ್ದಾರೆ.

# ಮಾನವೀಯತೆಯ ಮೌಲ್ಯ, ಉತ್ತಮ ಕೌಶಲ್ಯಾಧಾರಿತ ಜ್ಞಾನ ಅಗತ್ಯ; ಡಾ. ಮೃತ್ಯುಂಜಯ ರುಮಾಲೆ

**ಅ.ಶ. ಸುದ್ದಿ ಕೊಪ್ಪಳ**

ಕೊಪ್ಪಳ :ಬದುಕಿನಲ್ಲಿ ಭಾವನೆಗಳು ಬಹಳ ಮುಖ್ಯ. ನಮ್ಮ ಹಿರಿಯರು ಬದುಕಿನಲ್ಲಿ ಸುಂದರ ಭಾವನೆಗಳನ್ನು ಹೊತ್ತುಕೊಂಡು ಬದುಕಿದ್ದವರು. ಅವರಿಗೆ ಮಾನವಿತೆಯ ಮೌಲ್ಯಗಳು ಜೀವನದ ಆದರ್ಶಗಳಾಗಿದ್ದವು. ಅವರಲ್ಲಿ ಅಕ್ಷರ ಜ್ಞಾನದ ಪ್ರಮಾಣ ಕಡಿಮೆ ಇದ್ದರೂ ಬದುಕಿನ ಮೌಲ್ಯಗಳಿಗೆ ಕೊರತೆ ಇರಲಿಲ್ಲ. ಆದರೆ ಇಂದು ಅಕ್ಷರಸ್ಥರ ಸಂಖ್ಯೆ ಹೆಚ್ಚಾದರೂ ವಿದ್ಯಾರ್ಥಿಗಳಲ್ಲಿ ಮೌಲ್ಯಗಳ ಕೊರತೆ ಎದ್ದು ಕಾಣುತ್ತಿದೆ ಎಂದು ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ಸಾಹಿತಿಗಳಾಗಿರುವ ಡಾ. ಮೃತ್ಯುಂಜಯ ರುಮಾಲೆ ಹೇಳಿದರು. ನಗರದ ಶ್ರೀ ಗವಿಸಿದ್ದೇಶ್ವರ ಪದವಿ ಮಹಾವಿದ್ಯಾಲಯದಲ್ಲಿ ದಿನಾಂಕ 04.09.2026ರಂದು ಬೆಳಗ್ಗೆ 09;30ಕ್ಕೆ ಆಯೋಜಿಸಿದ 2026–27ನೇ ಸಾಲಿನ ವಿದ್ಯಾರ್ಥಿ ಮಂಡಳಿ ಉದ್ಘಾಟನೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಬದುಕಿನಲ್ಲಿ ಅಕ್ಷರ ಜ್ಞಾನ ತುಂಬಾ ಅಗತ್ಯ ಅದರ ಜೊತೆಗೆ ಬದುಕಿನಲ್ಲಿ ಮಾನವೀಯತೆಯು ಬಹಳ ಅಗತ್ಯವಾಗಿದೆ. ನಮ್ಮ ಹಿರಿಯರ ಬದುಕು ನಮಗೆ ಆದರ್ಶವಾಗಬೇಕು. ಮಾನವೀಯತೆಯ ಮೌಲ್ಯ , ಉತ್ತಮ ಕೌಶಲ್ಯಾಧಾರಿತ ಜ್ಞಾನವನ್ನು ಬೆಳಸಿಕೊಂಡಾಗ ಬದುಕಿಗೊಂದು ಅರ್ಥ ಬರುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಶ್ರೀ ಗವಿಸಿದ್ದೇಶ್ವರ ವಿದ್ಯಾವರ್ಧಕ ಟ್ರಸ್ಟ್ ಕಾರ್ಯದರ್ಶಿಗಳಾದ ಡಾ. ಆರ್. ಮರೇಗೌಡ ಅವರು ಮಾತನಾಡಿ ಶ್ರೀ ಗವಿಸಿದ್ದೇಶ್ವರ ಮಹಾವಿದ್ಯಾಲಯ ಸಕಲ ಸೌಲಭ್ಯದಿಂದ ಕೂಡಿದ್ದು, ಇದರ ಸದುಪಯೋಗ ಪಡೆದು ವಿದ್ಯಾವಂತರಾಗಿ ಬದುಕನ್ನು ಕಟ್ಟಿಕೊಳ್ಳುವುದರ ಜೊತೆಗೆ ಉತ್ತಮ ನಾಗರಿಕರಾಗಿ ಬೆಳೆಯಬೇಕು. ಹೆತ್ತ ತಂದೆ ತಾಯಿಯರಿಗೂ, ಶಿಕ್ಷಣ ನೀಡುವ ಸಂಸ್ಥೆಗಳಿಗೂ ಗೌರವ ತರುವಂತೆ ಬೆಳೆಯಬೇಕು ಎಂದು ಹೇಳಿದರು. ವಿದ್ಯಾರ್ಥಿ ಮಂಡಳಿಯ ಕಾರ್ಯಾಧ್ಯಕ್ಷರಾದ ಡಾ. ನಾಗರಾಜ




ದಂಡೋತಿ ಪ್ರಾಸ್ತಾವಿಕವಾಗಿ ಮಾತನಾಡಿದರು. 2024–25ನೇ ಸಾಲಿನ ಬಳ್ಳಾರಿ ವಿಶ್ವವಿದ್ಯಾಲಯದ ಸ್ನಾತಕ ಪದವಿಯಲ್ಲಿ ರ್‍ಯಾಂಕ್ ವಿಜೇತರಾದ ಕು. ಕೀರ್ತಿ (ಬಿ.ಎ 7ನೇ ರ್‍ಯಾಂಕ್), ಕು. ಸರಸ್ವತಿ (ಬಿ.ಎಸ್.ಸಿ 4ನೇ ರ್‍ಯಾಂಕ್), ಹಿಮಬಿಂದು (ಬಿ.ಎಸ್.ಸಿ 8ನೇ ರ್‍ಯಾಂಕ್) ವಿದ್ಯಾರ್ಥಿಗಳಿಗೆ ಮಹಾವಿದ್ಯಾಲಯದ ಪರವಾಗಿ ಗೌರವಿಸಲಾಯಿತು. ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಚನ್ನಬಸವ, ಪ್ರಾಧ್ಯಾಪಕರಾದ ಡಾ. ದಯಾನಂದ್ ಸಾಳುಂಕೆ, ಪ್ರೊ. ಶರಣಬಸಪ್ಪ ಬಿಳಿಯಲೆ, ಡಾ. ರಾಜು ಹೊಸಮನಿ, ಡಾ. ಕರಿಬಸವೇಶ್ವರ, ಡಾ. ಮಂಜುನಾಥ್ ಎಂ, ಡಾ. ವೆಂಕಟೇಶ್ ನಾಯಕ್, ಶರಣಪ್ಪ ಚೌಹಾಣ್, ಡಾ. ಮಂಜುನಾಥ್ ಗಾಳಿ, ಡಾ. ಅರುಣ್ ಕುಮಾರ್ ಎ. ಜಿ, ಡಾ. ಜಾಲಿಹಾಳ ಶರಣಪ್ಪ, ಮಹೇಶ ಬಿರಾದಾರ್, ವಿನೋದ ಮುದಿಬಸನಗೌಡರ್, ಪ್ರವೀಣ ಹಾದಿಮನಿ, ಡಾ. ಸುಂದರ ಮೇಟಿ, ಆಕಾಶ್ ಊಟಿ, ಕಿರಣ್‌ಕುಮಾರ್ ಕುರಿ, ಅಶ್ಫಾಕ್ ಅಲಿ, ಸುಶ್ಮಿತಾ ಗದ್ದಿಕೇರಿ, ಶ್ವೇತ ಗಿರಡ್ಡಿ, ಮಲ್ಲೇಶ್ ಗುಡುರ ವೆಂಕಟೇಶ ಬೋವಿ, ಕನಕಪ್ಪಾ ಗೊಂಡಬಾಳ್, ಶರಣಪ್ಪ ಗುಳುಗುಳಿ, ಹಾಗೂ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಭಾಗವಹಿಸಿದ್ದರು. ಡಾ. ಶಶಿಕಾಂತ್ ಉಮ್ಮಾಪುರೆ ಮತ್ತು ಮಂಜುನಾಥ ಹಿರೇಮಠ ನಿರೂಪಿಸಿದರು, ಶ್ವೇತಗಿ ರೆಡ್ಡಿ ವಂದಿಸಿದರು, ಕು. ಸುಧಾ ಪ್ರಾರ್ಥಿಸಿದರು.

# ಅಣೆಕಟ್ಟು ಸುರಕ್ಷತಾ ಸಂಸ್ಥೆಯ ವೆಬ್‌ಸೈಟ್ ಹ್ಯಾಕ್ ಮಾಡಿ ದತ್ತಾಂಶ ಕಳವು ಮಾಡಿದ ಸೈಬರ್ ಚೋರರು

**ಅ.ಶ. ಸುದ್ದಿ ಕೊಪ್ಪಳ**

ಬೆಂಗಳೂರು: ರಾಜ್ಯದ ಜಲಾಶಯಗಳ ಭದ್ರತೆ ಹಾಗೂ ಇತರ ಮಾಹಿತಿ ಸಂಗ್ರಹಿಸಿರುವ ಅಣೆಕಟ್ಟು ಸುರಕ್ಷತಾ ಸಂಸ್ಥೆ (ಡಿಎಸ್‌ಒ) ಹಾಗೂ ಅದಕ್ಕೆ ಸಂಬಂಧಿಸಿದ ವಿಭಾಗಗಳ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಿರುವ ಸೈಬರ್ ವಂಚಕರು, ದತ್ತಾಂಶಗಳನ್ನು ಕಳವು ಮಾಡಿರುವ ವಿಚಾರ ಬೆಳಕಿಗೆ ಬಂದಿದೆ. ಅಣೆಕಟ್ಟು ಸುರಕ್ಷತಾ ಸಂಸ್ಥೆ( ಡಿಎಸ್‌ಒ) ಮತ್ತು ಅಣೆಕಟ್ಟು ಪುನಶ್ಚೇತನ ಹಾಗೂ ಸುಧಾರಣಾ ಯೋಜನೆ (ಡಿಆರ್‌ಐಪಿ)ಯ ರಾಜ್ಯ ಯೋಜನಾ ನಿರ್ವಹಣಾ ಘಟಕ (ಎಸ್‌ಪಿಯುಎಂ)ಕ್ಕೆ ಸಂಬಂಧಿಸಿದ ವೆಬ್‌ಸೈಟ್‌ಗಳನ್ನು ಹ್ಯಾಕ್ ಮಾಡಲಾಗಿದೆ ಎಂದು ಅಣೆಕಟ್ಟು ಸುರಕ್ಷತಾ ಸಂಸ್ಥೆಯ ಮುಖ್ಯ ಎಂಜಿನಿಯರ್ ಕಚೇರಿಯ ಅಧಿಕಾರಿಗಳು ಸೈಬರ್ ಕಮಾಂಡ್ ಸೆಂಟರ್‌ಗೆ ದೂರು ನೀಡಿದ್ದಾರೆ. ಪ್ರಾಥಮಿಕ ವಿಚಾರಣೆಯಲ್ಲಿ ಯುಕೆ ಅಥವಾ ಅಮೆರಿಕದಿಂದ ಹ್ಯಾಕ್ ಮಾಡಿ ಡೇಟಾ ಕಳವು ಮಾಡಿರುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಅಣೆಕಟ್ಟು ಸುರಕ್ಷತಾ ಸಂಸ್ಥೆ ಅಡಿಯಲ್ಲಿರುವ ಎಸ್‌ಪಿಯುಎಂ ಮತ್ತು ಡಿಆರ್‌ಐಪಿ ಹಾಗೂ ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಸಂಬಂಧಿಸಿದ ಕೆಲ ಐಪಿ ವಿಳಾಸಗಳಿಗೆ ಅಪರಿಚಿತ ಐಪಿ ವಿಳಾಸಗಳು ಪ್ರವೇಶಿಸಿ, ಗೌಪ್ಯ ಮಾಹಿತಿಯನ್ನು ಕಳವು ಮಾಡಿವೆ.



ಡಿಆರ್‌ಐಪಿ, ರಾಜ್ಯದ ದೊಡ್ಡ ಅಣೆಕಟ್ಟೆಗಳ ಮೇಲ್ವಿಚಾರಣೆ, ಡ್ಯಾಂಗಳ ಸುರಕ್ಷತೆಯ ಮೇಲ್ವಿಚಾರಣೆ ಹೊಣೆ ಹೊತ್ತಿಕೊಂಡಿದೆ. ಇದೀಗ ಈ ವೆಬ್‌ಸೈಟ್‌ಗಳು ಹ್ಯಾಕ್ ಆಗಿರುವುದಿಂದ ಜಲಾಶಯಗಳ ಮಾಹಿತಿ ಸೋರಿಕೆ ಆಗುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಆದ್ದರಿಂದ ಕೃತ್ಯದ ಹಿಂದಿರುವ ಅಪರಿಚಿತ ವ್ಯಕ್ತಿ ಅಥವಾ ಗುಂಪು ಪತ್ತೆ ಹಚ್ಚುವ ಕಾರ್ಯ ನಡೆಯುತ್ತಿದ್ದು, ಅಪರಿಚಿತ ಐಪಿ ವಿಳಾಸಗಳು ಹಾಗೂ ಯಾವ ನೆಟ್‌ವರ್ಕ್ ಹಾಗೂ ಇತರ ಡಿಜಿಟಲ್ ಮಾಹಿತಿ ಕುರಿತು ವಿವರ ಸಂಗ್ರಹಿಸಲಾಗುತ್ತಿದೆ. ಪ್ರಾಥಮಿಕವಾಗಿ ಅಮೆರಿಕದಿಂದಲೇ ವೆಬ್‌ಸೈಟ್ ಹ್ಯಾಕ್ ಆಗಿರುವ ಬಗ್ಗೆ ಕೆಲ ಸಾಕ್ಷ್ಯ ದೊರೆತಿವೆ ಎಂದು ಮೂಲಗಳು ತಿಳಿಸಿವೆ.

**ದತ್ತಾಂಶ ಮಾರಾಟದ ಶಂಕೆ:** ಅಣೆಕಟ್ಟು ಸುರಕ್ಷತಾ ಸಂಸ್ಥೆ (ಡಿಎಸ್‌ಒ) ರಾಜ್ಯದ ಕೆಆರ್‌ಎಸ್, ಭದ್ರಾ, ವರಾಹಿ, ಲಿಂಗನಮಕ್ಕಿ, ಹಾರಂಗಿ, ಹೇಮಾವತಿ, ತುಂಗಾಭದ್ರಾ ಸೇರಿ ರಾಜ್ಯದ ಎಲ್ಲ ಜಲಾಶಯಗಳ ಒಳಹರಿವು, ಹೊರಹರಿವು, ನೀರಿನ ಸಂಗ್ರಹ ಸಾಮರ್ಥ್ಯ, ಹರಿಯುವ ಮಾರ್ಗ, ಕ್ರಸ್ಟ್‌ಗೇಟ್‌ಗಳ ವಿವರ, ಆಯಾ ಡ್ಯಾಂಗಳ ಜಲಾನಯನ ಪ್ರದೇಶಗಳ ವ್ಯಾಪ್ತಿ, ಭದ್ರತೆ ಸೇರಿ ಸಂಪೂರ್ಣ ಮಾಹಿತಿ ಸಂಗ್ರಹಿಸಿಕೊಂಡಿದೆ. ಈ ಪೈಕಿ ಕೆಲ ಮಾಹಿತಿಯನ್ನು ಮಾತ್ರ ಸಾರ್ವಜನಿಕವಾಗಿ ಬಿತ್ತರಿಸಲಾಗುತ್ತದೆ. ಆದರೆ, ಇತರ ಬಾಹ್ಯ ಮಾಹಿತಿಯನ್ನು ಗೌಪ್ಯವಾಗಿಡಲಾಗುತ್ತದೆ. ಇದೀಗ ಹ್ಯಾಕ್ ಮಾಡಿರುವ ವ್ಯಕ್ತಿ ಅಥವಾ ತಂಡ ಜಲಾಶಯಗಳ ಸಂಪೂರ್ಣ ಮಾಹಿತಿಯನ್ನು ಕಳವು ಮಾಡಿದ್ದು, ಅವುಗಳನ್ನು ಹಣಕ್ಕಾಗಿ ದೇಶದ್ರೋಹಿಗಳು ಅಥವಾ ಸಮಾಜಘಾತುಕರಿಗೆ ಮಾರಾಟ ಮಾಡುವ ಸಾಧ್ಯತೆಯಿದೆ. ಅದ್ದರಿಂದ ಡ್ಯಾಂಗಳ ಭದ್ರತೆಗೆ ಅಪಾಯ ತಂದ್ದೊಡ್ಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

# ಲೇಖಕರ ದಿನಚರಿ....

## ಕನ್ನಡ ಶಾಲೆಗಳನ್ನು ಉಸಿರಾಡಲು ಬಿಡಿ

ಅದೊಂದು ದಿವಿನಾದ ದಿನ. .ನಾನು ಐದನೇ ಇಯತ್ತೆಯಲ್ಲಿ ಓದುತ್ತಿದ್ದೆನೇನೊ...ಸರಿಯಾಗಿ ನೆನಪಿಲ್ಲ. ಆದರೆ ಅವರ ಹೆಸರು ಮಾತ್ರ ಚೆನ್ನಾಗಿ ನೆನಪಿದೆ . ಕಿರಣ್ ಮಾಸ್ತರು ! ಅಪ್ಪಟ ಕನ್ನಡಾಭಿಮಾನಿಯಾಗಿದ್ದವರು. ಆ ದಿನದ ತರಗತಿಯ ಕೊನೆಗೆ ನಮಗೆಲ್ಲ ಒಂದು ಮನೆಗೆಲಸ ಕೊಟ್ಟರು. ಸೂರ್ಯ, ಚಂದ್ರ , ಭೂಮಿ, ಬಾನು, ನಕ್ಷತ್ರ ಇವಕ್ಕೆಲ್ಲ ಕನ್ನಡ ಭಾಷೆಯಲ್ಲೇ ಅವೆಷ್ಟೊ ಸಮನಾರ್ಥಕ ಪದಗಳಿವೆ. ಅವನ್ನೆಲ್ಲಾ ಹುಡುಕಿ ಬರೆದು ತರಬೇಕೆಂಬ ಕೆಲಸ! ಅದೊಂದು ಕೆಲಸವೇ ಮೊದಲ ಬಾರಿಗೆ ಕನ್ನಡದ ಶಬ್ಧಕೋಶವನ್ನು ಕೈಯಲ್ಲಿ ಹಿಡಿಯುವಂತೆ , ಪದಗಳನ್ನು ಹುಡುಕುವಂತೆ ಮಾಡಿತ್ತು ! ಪ್ರತಿ ಪುಟ ತಿರುಗಿಸಿ ಸಿಕ್ಕ ಪದಗಳನ್ನು ಹೆಕ್ಕಿ ಒಂದೆಡೆ ಬರೆದಾಗ ಅದೆಷ್ಟು ಖುಷಿ. ..! ಊಹಿಸಿ ...ಒಂದು ಹಳ್ಳಿಯ ಅಪ್ಪಟ ಕನ್ನಡ ಶಾಲೆಯಲ್ಲಿ ಕಲಿಯುವ ಮಕ್ಕಳಿಗೆ ಅದೇ ಅವತ್ತಿಗೆ ದೊಡ್ಡ ಸಾಧನೆ. ಎಲ್ಲರಿಗೂ ಶಬ್ಧಕೋಶದ ಸೌಲಭ್ಯವಿರದ ಕಾಲದಲ್ಲಿ ನನಗೆ ಸುಲಭವಾಗಿ ಸಿಕ್ಕ ಕೋಶದೊಳಗೆ ನಾನೊಂದು ಮಿಣುಕು ಹುಳುವಾಗುವಂತೆ ಮಾಡಿದ್ದು ಅದೇ ಕಿರಣ್ ಮಾಸ್ತರು. ಅವರ ಕನ್ನಡ ಭಾಷೆಯನ್ನು ಕಲಿಸಬೇಕೆಂಬ ಅಭಿಯಾನ. ಮುಂದೆ ಕನ್ನಡ ಭಾಷೆಯನ್ನು ನನ್ನ ಉಸಿರಾಗಿಸಿಕೊಳ್ಳುವ ನನ್ನ ಯಾನ ಶುರುವಾಗಿದ್ದೇ ಆವಾಗ. ಆ ಹೊತ್ತಿಗೆ " ಕನ್ನಡವೆಂದರೆ ಕುಣಿಯುವುದೆನ್ನೆದೆ, ಕನ್ನಡವೆನೆ ಕಿವಿ ನಿಮಿರುವುದು" ಅಂತನ್ನಿಸೋಕೆ ಆರಂಭವಾಯ್ತು. ಹಾಗನ್ನಿಸಿದ್ದಕ್ಕೆ ಇವತ್ತು ನಾನೊಬ್ಬ ಕನ್ನಡ ಮಾಧ್ಯಮ ವಿದ್ಯಾರ್ಥಿನಿ ಅನ್ನುವ ಹೆಮ್ಮೆಯಿಂದ ಹೇಳಿಕೊಳ್ಳುವ ವಿಶ್ವಾಸವನ್ನು ಬೆಳೆಸಿದ್ದು. ಆ ಹೊತ್ತಿಗೇ "ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯಶಿವ" ಅಂದ ಕುವೆಂಪು ಧ್ಯಾನ ತೀವ್ರವಾಗಿತ್ತು. ಅಮ್ಮನನ್ನು ಬಿಟ್ಟರೆ ಮಾತೃಭಾಷೆಯ ಮೇಲಿನ ಅಂಥ ಅಗಾಧ ಪ್ರೀತಿಯನ್ನು ಹುಟ್ಟುಹಾಕಿದ ಶಾಲೆಗಳು ಇವತ್ತಿಗೆ ಬಹಳ ಶೋಚನೀಯ ಪರಿಸ್ಥಿತಿಯಲ್ಲಿವೆ ಅನ್ನುವ ದುರಂತವನ್ನು ಅರಗಿಸಿಕೊಳ್ಳಬೇಕಾದ ಕಾಲದಲ್ಲಿ ನಾವಿದ್ದೇವೆ. ಪ್ರತೀವರ್ಷ ಮಕ್ಕಳಿಲ್ಲದ ಮಾಸ್ತರಿಲ್ಲದ ಅದೆಷ್ಟೋ ಶಾಲೆಗಳು ಚರಮಗೀತೆ ಹಾಡಿಸಿಕೊಳ್ಳುತ್ತಿವೆ. ಕೆಲವು ಕಡೆ ಶಿಕ್ಷಕರಿಲ್ಲ. ಕೆಲವೆಡೆ ಕಟ್ಟಡಗಳೇ ಇಲ್ಲ. ಇನ್ನು ಆಸಕ್ತರೀತಿಯಲ್ಲಿ ಕಲಿಸುವ ಶಿಕ್ಷಕರನ್ನೆಲ್ಲಿ ಹುಡುಕುವುದು ? ಕೇವಲ ಸಂಬಳಕ್ಕಾಗಿ , ಉದ್ಯೋಗದ ಆಸೆಗಾಗಿ ಶಿಕ್ಷಕ ತರಬೇತಿಯ ಬೆನ್ನುಬಿದ್ದಿರುವ ಯುವಜನರ ಸಂಖ್ಯೆಯೇ ಹೆಚ್ಚಾದಂತಿದೆ ಹೊರತಾಗಿ ಅಲ್ಲಿ ನಮ್ಮ ಭಾಷೆಯೆಂಬ ಅಭಿಮಾನದಿಂದ ಕಲಿಸುವವರ ಕೊರತೆಯೂ ಕಂಡುಬರುತ್ತಿದೆ. ಇನ್ನು ಆಸೆಯಿಂದ ಕಲಿಸುವ ಶಿಕ್ಷಕರಿಗೆ ನಿರಂತರ ಕೆಲಸದ ಒತ್ತಡ, ತರಬೇತಿಗಳು, ಪರೀಕ್ಷಾ ಮೇಲ್ವಿಚಾರಣೆ, ಎಲೆಕ್ಷನ್ನುಗಳು, ಗಣತಿ ಮುಂತಾದ ಕಾರಣಗಳಿಂದ ಸಿಗುವ ಸಮಯವನ್ನೆಲ್ಲ ಬೇರೆಯದಕ್ಕಾಗಿಯೇ ವಿನಿಯೋಗಿಸಬೇಕಾದ ಪರಿಸ್ಥಿತಿ. ಸರ್ಕಾರಿ ಶಾಲೆಗಳಲ್ಲಿ ಈ ಸಮಸ್ಯೆಯಾದರೆ ಖಾಸಗಿ



ಶಾಲೆಗಳದ್ದು ಬೇರೆ ರೀತಿ. ಸರ್ಕಾರವೇ ಕೊಟ್ಟ ಅನುಮತಿಯನ್ನು ದುರುಪಯೋಗಿಸಿಕೊಳ್ಳುವ ಅದರಲ್ಲೂ ಕನ್ನಡದ ಹೆಸರು ಹೇಳಿಕೊಂಡು ಒಳಗೆ ಆಂಗ್ಲಭಾಷೆಯನ್ನು ಬೋಧಿಸುವ ಶಾಲೆಗಳು ಹೇಗೆ ತಾನೆ ಮಾತೃಭಾಷೆಯ ಮೇಲಿನ ಪ್ರೀತಿಯನ್ನು ಮಕ್ಕಳಲ್ಲಿ ಜಾಗೃತಗೊಳುವಂತೆ ಮಾಡಲು ಸಾಧ್ಯ ? ಹದ ಮಾಡಿದ ಭೂಮಿಗೆ ಆಗಷ್ಟೇ ಬಿತ್ತಿದ ಬೀಜಕ್ಕೆ ಒಳ್ಳೆಯ ಪೋಷಣೆ ಕೊಟ್ಟಾಗ ಮಾತ್ರ ಅದೊಂದು ಆರೋಗ್ಯವಂತ ಗಿಡವಾಗುವುದು. ಮಾತೃಭಾಷೆಯೂ ಹಾಗೆ ಅಮ್ಮನ ಮಡಿಲು ಬಿಟ್ಟು ಶಾಲೆಗೆ ಕಾಲಿರಿಸುವ ಮಗುವಿಗೆ ಅಮ್ಮನ ಭಾಷೆಯಲ್ಲೇ ಕಲಿಯುವ ವಾತಾವರಣ ಸಿಕ್ಕಿದರೆ ಅದಕ್ಕಿಂತ ಖುಷಿ ಆ ಮಗುವಿಗೆ ಬೇರಾವುದೂ ಇರಲಾರದು. ಒಂದೆಡೆ ಇತರ ಮಾಧ್ಯಮಗಳಿಗೆ ಅವಕಾಶ ಕೊಟ್ಟು ಆಲಂಗಿಸುವ ಸರ್ಕಾರ ಮತ್ತೊಂದೆಡೆ ಕನ್ನಡ ಶಾಲೆಗಳ ಅವನತಿಗೆ ಕಾರಣವಾಗುತ್ತಿದೆ. ಇಂಥ ಬದಲಾದ ಕಾಲಘಟ್ಟದಲ್ಲಿ ಕಡೇ ಪಕ್ಷ ಒಂದು ದಿಟ್ಟ ನಿರ್ಧಾರದ ಅವಶ್ಯಕತೆ ಸರ್ಕಾರದ ಮುಂದಿದೆ. ಬಹುಶಃ ಈಗಾಗಲೆ ಆ ಮಾತು ಕೇಳಿ ಬರುತ್ತಿದೆಯಾದರೂ ಅದು ಸಂಪೂರ್ಣವಾಗಿ ಚಾಲ್ತಿಗೆ ಬರಬೇಕಾದ ಅನಿವಾರ್ಯತೆ ಇದೆ. ಪ್ರತಿಯೊಬ್ಬರಿಗೂ ಸರ್ಕಾರಿ ಕೆಲಸ ಬೇಕು, ಸರ್ಕಾರದ ಸವಲತ್ತು ಬೇಕು, ಸುಲಭವಾಗಿ ಮತ್ತು ಪುಕ್ಕಟೆಯಾಗಿ ಸಿಗುವ ಎಲ್ಲವೂ ಬೇಕು. ಆದರೆ ಸರ್ಕಾರಿ ಶಾಲೆ ಬೇಡ. ಹೌದು ! ಇದು ದುರಂತವಲ್ಲದೆ ಮತ್ತೇನು? ಈ ನಿಟ್ಟಿನಲ್ಲಿ ನಿಯಮ ಬದಲಾಗಬೇಕಿದೆ. ನಿಜ, ಸರ್ಕಾರಿ ನೌಕರರ ಮಕ್ಕಳು ಕಡ್ಡಾಯವಾಗಿ ಸರ್ಕಾರಿ ಶಾಲೆಗಳಲ್ಲೇ ಓದಬೇಕು. ಇಂತಹ ಒಂದು ನಿಯಮ ಕಡ್ಡಾಯವಾದರೆ ಬಹುಶಃ ಒಂದಷ್ಟು ಸುಧಾರಣೆ ಕಂಡೀತು. ಹಾಲಿನಿಂದ ಹಿಡಿದು ಬಿಸಿಯೂಟದವರೆಗೆ ಶಾಲೆಗಳಿಗೆ ಪ್ರೋತ್ಸಾಹ ನೀಡಿ ಮಕ್ಕಳನ್ನು ಸೆಳೆಯುವ ಸರ್ಕಸ್ಸು ಮಾಡುತ್ತಿರುವ ಸರ್ಕಾರ ಆಂಗ್ಲ ಮಾಧ್ಯಮದ ಖಾಸಗಿ ಶಾಲೆಗಳಿಗೆ ಅನುಮತಿ ನೀಡುವುದನ್ನು ನಿಲ್ಲಿಸಬೇಕು. ಆಗ ಅನಿವಾರ್ಯತೆಯಿಂದಲಾದರೂ ಮಕ್ಕಳು ಕನ್ನಡದ ಶಾಲೆಗಳಿಗೆ ಬರುವಂತಾಗುತ್ತದೆ. ಹಾಗೆ ನೋಡಿದರೆ ಇವತ್ತು ಉನ್ನತ ಹುದ್ದೆಗಳಲ್ಲಿರುವ ಅಧಿಕಾರಿಗಳನ್ನು ನೋಡಿ. ಅವರಲ್ಲಿ ಹೆಚ್ಚಿನವರು ಕನ್ನಡ ಮಾಧ್ಯಮದಲ್ಲೇ ಓದಿದವರಾಗಿರುತ್ತಾರೆ. ಮಾತೃಭಾಷೆಯ ಶಕ್ತಿ ಅದು. ಆತ್ಮವಿಶ್ವಾಸವನ್ನು ಹೆಚ್ಚಿಸುವ ಶಕ್ತಿ. ಆದರೆ ಈಗಿನ ಜನರ ನಂಬಿಕೆ ಹೇಗಾಗಿದೆಯೆಂದರೆ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವಿಲ್ಲ. ಪಾಠಗಳೂ ಸರಿಯಾಗಿ ನಡೆಯುವುದಿಲ್ಲ. ಮಕ್ಕಳು ಶಿಸ್ತು ಕಲಿಯುವುದಿಲ್ಲ . . . ಹೀಗೆ. ..! ತಮಾಶೆಯೆಂದರೆ ಶಿಕ್ಷಕರ ತರಬೇತಿಗಳಲ್ಲಿ ಅತ್ಯುತ್ತಮ ಅಂಕ ತೆಗೆದುಕೊಂಡವರು ಮಾತ್ರ ಸರ್ಕಾರಿ ಶಾಲೆಗಳಿಗೆ ನಿಯುಕ್ತಿಯಾಗುವುದು. ಅಲ್ಲಿ ಸಲ್ಲದವರು ಖಾಸಗಿ ಶಾಲೆಗಳತ್ತ ಮುಖ ಮಾಡುತ್ತಾರೆ. ಪದವಿಗಳು ಮಾತ್ರವೇ ಅತ್ಯುತ್ತಮ ಶಿಕ್ಷಕರನ್ನು ತಯಾರು ಮಾಡುವುದಿಲ್ಲವಾದರೂ ಮಕ್ಕಳ ಮಟ್ಟಕ್ಕಿಳಿದು ಕಲಿಸಬೇಕಾದ ಪರಿಕಲ್ಪನೆಯನ್ನು ಅರೆದು ಕುಡಿದವರೇ ಕನ್ನಡ ಶಾಲೆಗಳಲ್ಲಿರುವವರು. ಎಷ್ಟೋ ಕಡೆಗಳಲ್ಲಿ ಖಾಸಗಿ ಶಾಲೆಗಳು ತರಬೇತಿಯೇ ಇಲ್ಲದ ಅಥವಾ ಆ ವಿದ್ಯಾರ್ಹತೆಯೇ ಇಲ್ಲದವರನ್ನು ಅವಶ್ಯಕತೆಗಾಗಿ ಆಯ್ಕೆ ಮಾಡಿಕೊಂಡಿರುತ್ತಾರೆ. ಹಾಗಾದರೆ ಕನ್ನಡ ಶಾಲೆಗಳು ಯಾವ ಕಾರಣಕ್ಕೆ ಮುಚ್ಚುವ ಪರಿಸ್ಥಿತಿಯಲ್ಲಿವೆ. ...? ಎಲ್ಲವೂ ಇದ್ದು ಏನೂ ಇಲ್ಲದ ಸ್ಥಿತಿ. ಇವತ್ತು ಒಬ್ಬ ಹಳ್ಳಿಯ ಗಮಾರನೂ ನನ್ನ ಮಗ ಇಂಗ್ಲಿಷ್ ಕಲಿಯಬೇಕು, ಆಫೀಸರಾಗಬೇಕೆಂದೆ ಬಯಸುತ್ತಾನೆ ಹೊರತು ರೈತನಾಗಬೇಕೆಂದಲ್ಲ. ಅದಕ್ಕಾಗಿ ತನ್ನ ದುಡಿಮೆಯ ಬಹುಪಾಲು ಹಣವನ್ನು ಖಾಸಗಿ ಶಾಲೆಗಳಿಗೆ ನೀಡಿಯಾದರೂ ಮಕ್ಕಳನ್ನು ಸೇರಿಸುತ್ತಾನೆ. ಹಾಗಿದ್ದಲ್ಲಿ ಬೇರೆ ಯಾವ ವರ್ಗದ ಜನರಿಂದ ನಾವು ಮಕ್ಕಳನ್ನು ನಿರೀಕ್ಷಿಸಬಹುದು ? ಮೂರು ಹೊತ್ತು ಊಟಕ್ಕೂ ತತ್ವಾರವಿರುವ ಕೆಳವರ್ಗದ ಬೀದಿಗಳಿಂದ ಬರುವ ಮಕ್ಕಳು. ಒತ್ತಾಯದಿಂದ ಕಲಿಯಲು ಬರುವಂಥವರು. ಇಲ್ಲಿ ನನಗೆ ಗೊತ್ತಿರುವ ಸರ್ಕಾರದ ಅನುದಾನಿತ ಶಾಲೆಯೊಂದಿದೆ. ಆ ಶಾಲೆಯ ಆಡಳಿತ ಮಂಡಳಿ ಪ್ರತಿವರ್ಷ ಮಕ್ಕಳ ದಾಖಲಾತಿಗಾಗಿ ಪಡುವ ಕಷ್ಟ ಪಡಿಪಾಟಲು ನೋಡಿದರೆ ನಕ್ಕುಬಿಡುತ್ತೀರಿ. ಶಾಲೆ ಆರಂಭವಾಗಲು ಮೂರು ತಿಂಗಳಿರುವಂತೆ ಮೊದಲು ಎಲ್ಲ ಸ್ಲಮ್ ಏರಿಯಾಗಳಿಗೆ ಎಡತಾಕುತ್ತಾರೆ. ಅಲ್ಲಿ ಪ್ರತಿಮನೆಯಲ್ಲೂ ಜಾಲಾಡಿ ಸಿಕ್ಕ ಮಕ್ಕಳನ್ನು ತಂದು ದಾಖಲಾತಿ ಮಾಡುತ್ತಾರೆ. ಅದೂ ವಯಸ್ಸಿನ ಸರಿಯಾದ ಲೆಕ್ಕಾಚಾರಗಳನ್ನೂ ಎಣಿಸದೆ. ದಾಖಲೆಗೆ ಬೇಕಾದ ಅಂಕಿಅಂಶ ಸರಿದೂಗಿಸುತ್ತಾರೆ. ಅದಕ್ಕಾಗಿ ಬರುವ ಎಲ್ಲಾ ಸರ್ಕಾರಿ ಸವಲತ್ತುಗಳನ್ನೂ ಲಂಚ ಕೊಟ್ಟೊ ಅಥ-ವಾ ಶಾಸಕರು , ಮಂತ್ರಿಗಳನ್ನು ಹಿಡಿದೊ ಪಡೆದುಕೊಳ್ಳುತ್ತಾರೆ. ಹೆಸರಿಗಷ್ಟೆ ಶಾಲೆ . ..ಮಕ್ಕಳು ...!ಈ ರೀತಿ ಸ್ಲಮ್ ಮಕ್ಕಳನ್ನು ಗುರಿಮಾಡಿಕೊಳ್ಳುವ ಅನುದಾನಿತ ಶಾಲೆಗಳಿಂದಾಗಿ ಸರ್ಕಾರಿ ಶಾಲೆಗಳಲ್ಲಿ ಅಲ್ಲಿನ ಮಕ್ಕಳೂ ಸಿಗಲಾರದ ಸ್ಥಿತಿ . ಇಂತಹ ಹತ್ತಾರು ಕಾರಣಗಳು ಸರ್ಕಾರಿ ಶಾಲೆಗಳ ಅವನತಿಗೆ ಕಾರಣವಾಗಿವೆ. ಮುಚ್ಚುವ ಪರಿಸ್ಥಿತಿಗೆ ಬಂದಿವೆ. ಸಾಹಿತಿಗಳು, ವಿಜ್ಞಾನಿಗಳು, ನೇತಾರರು ಮುಂತಾದ ಕ್ಷೇತ್ರಗಳಲ್ಲಿನ ಅನರ್ಘ್ಯ ಮುತ್ತುರತ್ನಗಳ ಭಂಡಾರವನ್ನೇ ಈ ನಾಡಿಗೆ ಕೊಟ್ಟ ಸರ್ಕಾರಿ ಶಾಲೆಗಳು ಅವಸಾನ ಹೊಂದುತ್ತಿವೆ. ಆಧುನಿಕ ಸಮಾಜದಲ್ಲಿ ಸಮರ್ಥವಾಗಿ ಬದುಕಬೇಕಾದ ಹಪಹಪಿಕೆಯಿಂದಾಗಿ ಜನ ಆಂಗ್ಲಮಾಧ್ಯಮಕ್ಕೆ ಮೊರೆಹೋಗುತ್ತಿದ್ದಾರೆ. ಇದು ನಿಲ್ಲಬೇಕಾದರೆ ಮೊದಲೆ ಹೇಳಿದ ಹಾಗೆ ಸರ್ಕಾರಿ ನೌಕರಿ ಸರ್ಕಾರಿ ಸವಲತ್ತು ಸರ್ಕಾರಿ ಸಂಬಳ ಬಯಸುವ ಮಂದಿಯಾದರೂ ಸರ್ಕಾರಿ ಶಾಲೆಗಳನ್ನು ಉಳಿಸಬೇಕಿದೆ. ಆಗ ಮಾತ್ರ ಒಂದಷ್ಟು ಉಸಿರಾಡಬಹುದು.! ಏನಂತೀರಿ?

## ಪರದೇಸಿಗಳಾಗಿ ಪರದಾಡುತ್ತಿರುವ ಗಡಿನಾಡ ಕನ್ನಡಿಗರು

ಹೊರನಾಡ ಕನ್ನಡಿಗರಲ್ಲೇ ಮತ್ತೊಂದು ಪ್ರಭೇದವಿದೆ. ಅದು ಗಡಿನಾಡ ಕನ್ನಡಿಗರು. ರಾಜ್ಯಗಳ ರಚನೆಯ ವೇಳೆ ಕೆಲವು ಕನ್ನಡದ ಪ್ರದೇಶಗಳು ನಮ್ಮ ನೆರೆಮನೆಯ ರಾಜ್ಯಗಳಲ್ಲಿ ಉಳಿದುಹೋದವು. ಅಲ್ಲಿ ಅವರು ತಮ್ಮ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಬೇಕು ಎಂದು ಇಚ್ಛಿಸಿದರೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲೆಗಳಿದ್ದರೆ ಶಿಕ್ಷಕರಿಲ್ಲ, ಶಿಕ್ಷಕ-ರಿದ್ದರೆ ಪಠ್ಯಗಳಿಲ್ಲ ಎಂಬಂಥಹ ಪರಿಸ್ಥಿತಿ ನಿರ್ಮಾಣವಾಗಿದೆ. ಗಡಿನಾಡ ಕನ್ನಡಪರ ಸಂಘಟನೆಗಳು ಈ ಬಗ್ಗೆ ಹೋರಾಟ ಮಾಡುತ್ತಾ ಬಂದಿವೆಯಾದರೂ, ಆ ಸಂಘಟನೆಗಳಿಗೆ ಮತ್ತು ಕೆಲ ಸಮಾಜಪರ ಕಾರ್ಯಗಳನ್ನು ಮಾಡುತ್ತಿರುವ ಸಂಘಟನೆಗಳಿಗೆ ಸರ್ಕಾರ ನೀಡುತ್ತಿರುವ ನೆರವು ಸಾಲುತ್ತಿಲ್ಲ. 2010ರ ಮಾರ್ಚ್ ತಿಂಗಳಲ್ಲಿ ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿತ್ತು. ಚಂದ್ರಕಾಂತ ಬೆಲ್ಲದ ಅವರು ಇದಕ್ಕೆ ಅಧ್ಯಕ್ಷರಾದರು. ಪ್ರಾಧಿಕಾರ ಗಡಿ ಪ್ರದೇಶದಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಗಡಿಯ ಒಳಗೂ ಹೊರಗೂ ಇರುವ ಕನ್ನಡಿಗರ ಸ್ಥಿತಿ ಸುಧಾರಣೆ, ಗಡಿಯಾಚೆ ಕನ್ನಡ ಮಾಧ್ಯಮಗಳ ಶಾಲೆಗಳ ಸ್ಥಾಪನೆ, ಗ್ರಂಥ-ಾಲಯಗಳ ಸ್ಥಾಪನೆ ಮತ್ತು ಕನ್ನಡ ಪರ ಸಂಘಟನೆಗಳಿಗೆ, ಭಾಷಾ ಚಟುವಟಿಕೆಗಳಿಗೆ ಅನುದಾನ ನೀಡುವುದು, ಉಪನ್ಯಾಸ ಮಾಲಿಕೆಗಳನ್ನು ನಡೆಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟನೆ, ಗಡಿಯಲ್ಲಿರುವ ಕಲೆ, ಸಂಸ್ಕೃತಿ ಉಳಿಸುವಿಕೆ. ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಳ್ಳುವುದು, ಜನರ ಸಾಂಸ್ಕೃತಿ-ಕ ಆರ್ಥಿಕ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮ ವಹಿಸುವುದು ಮತ್ತು ಸಾಂಸ್ಕೃತಿಕ ಭವನಗಳ ನಿರ್ಮಾಣ ಇತ್ಯಾದಿ ಚಟುವಟಿ-ಕೆಗಳನ್ನು ನಡೆಸುವುದು ಈ ಪ್ರಾಧಿಕಾರದ ಕರ್ತವ್ಯವಾಗಿದೆ. ಗಡಿಭಾಗದಲ್ಲಿರುವ ಗ್ರಾಮಗಳ ಜನರು ಹೊರ ರಾಜ್ಯಗಳ ಜನ-ರಿಗೆ ಸಿಗುತ್ತಿರುವ ಸೌಲಭ್ಯ ನೋಡಿ ನಿರಾಶರಾಗುತ್ತಿದ್ದಾರೆ. ಆಂಧ್ರ ಸರ್ಕಾರ ಗಡಿ ಭಾಗದ ಕೃಷಿಕರಿಗೆ ಹೆಚ್ಚಿನ ಸೌಲಭ್ಯ ನೀಡುತ್ತಿದೆ. ವಸತಿ ಸೌಲಭ್ಯ, ನೀರಾವರಿ, ಗ್ಯಾಸ್, ರಸ್ತೆ ಅಭಿವೃದ್ಧಿಯಂತಹ ಪ್ರಮುಖ ಮೂಲಭೂತ ಸೌಕರ್ಯ ಒದಗಿಸುವ ಮೂಲಕ ಅವರ ಅಭಿವೃದ್ಧಿಗೆ ಅಲ್ಲಿನ ಸರ್ಕಾರಗಳು ಶ್ರಮಿಸುತ್ತಿದೆ. ಒಂದೇ ಹಳ್ಳಿಯಲ್ಲಿ ಅರ್ಧದಷ್ಟು ಜನ ಆಂಧ್ರಕ್ಕೂ ಇನ್ನರ್ಧ ಜನ ಕರ್ನಾಟಕಕ್ಕೂ ಸೇರಿದ ಉದಾಹರಣೆಗಳಿವೆ. ಹೀಗಾಗಿ ಇಲ್ಲಿ ಆಗುವ ತಾರತಮ್ಯ ನಿವಾರಣೆಯಾಗಬೇಕು. ಈ ನಿಟ್ಟಿನಲ್ಲಿ ಪ್ರಾಧಿಕಾರ ಸಫಲವಾಗಬೇಕು. ಗಡಿಯ ಜನರ ಬದುಕನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾರುಕಟ್ಟೆ, ಸಾರಿಗೆ-ಸಂಪರ್ಕ ರಸ್ತೆ, ಶಿಕ್ಷಣ, ವಸತಿ, ಆರೋಗ್ಯ ಮೂಲಭೂತ ಅವಶ್ಯಕತೆಗಳು ಪೂರೈಕೆಯಾಗಬೇಕು. ಕನ್ನಡ ಓದಿದ ಮಕ್ಕಳು ಶಿಕ್ಷಣ ಮುಂದುವ-ರಿಸಲು ಅವರಿರುವ ರಾಜ್ಯ ಸಹಾಯ ಮಾಡುವುದಿಲ್ಲ. ಅವರತ್ತ ಕರ್ನಾಟಕ ಸರ್ಕಾರ ಕೂಡ ಗಮನ ಕೊಡುವುದಿಲ್ಲ. ಉದ್ಯೋಗದ ವಿಚಾರದಲ್ಲಿ ಗಡಿನಾಡ ಮಕ್ಕಳು ಯಾರಿಗೂ ಬೇಡವಾಗಿದ್ದಾರೆ.




ಹೀಗಾಗಿ ಗಡಿನಾಡ ಕನ್ನಡಿಗರು ಅನಾಥ ಪ್ರಜ್ಞೆ ಅನುಭವಿಸುತ್ತಿದ್ದಾರೆ. ರಾಜ್ಯ ಸರ್ಕಾರದ ಹೊಣೆ ಏನು? ಗಡಿನಾಡ ಕನ್ನಡಿಗರ ಮತ್ತು ಕನ್ನಡ ಓದುವ ಮಕ್ಕಳಿಗೆ ಅಗತ್ಯವಾದ ಸೌಲಭ್ಯ ಕೊಡಲು ಸರ್ಕಾರ ಮುಂದಾಗಬೇಕಿದ್ದು, ಗಡಿನಾಡು ಶಿಕ್ಷಣ ನಿರ್ದೇಶನಾಲಯ ಸ್ಥಾಪನೆ ಆಗಬೇಕು. ಗಡಿ ತಾಲೂಕುಗಳಲ್ಲಿ ಕನಿಷ್ಠ ಹೋಬಳಿಗೆ ಒಂದರಂತೆ ಕನ್ನಡ ಮಾಧ್ಯಮ ವಸತಿ ಶಾಲೆ ಸ್ಥಾಪನೆ ಆಗಬೇಕು. ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ, ಅಲ್ಪ ಸಂಖ್ಯಾತರಿಗೆ ಉಚಿತ ವಿದ್ಯಾರ್ಥಿ ನಿಲಯಗಳು ಸ್ಥಾಪನೆಯಾಗಬೇಕು. ಸಂಸದರು ಅಥ-ವಾ ಶಾಸಕರು ತಮ್ಮ ನಿಧಿಯಿಂದ ಗಡಿನಾಡಿನ ಅಭಿವೃದ್ಧಿಗೆ ನಿರ್ದಿಷ್ಟ ಮೊತ್ತವನ್ನು ಕಡ್ಡಾಯವಾಗಿ ಮೀಸಲಿಡಬೇಕು. ಗಡಿನಾಡು ಅಭಿವೃದ್ಧಿ ಮಂಡಳಿ ಸ್ಥಾಪನೆಯಾಗಬೇಕು. ಕನ್ನಡದ ಆಸಕ್ತಿ ಇರುವ ಅಧಿಕಾರಿಗಳನ್ನು ನೇಮಿಸಬೇಕು ಅಥವಾ ವರ್ಗಾಯಿಸಬೇಕು. ಎಲ್ಲ ವರ್ಗದ ಸರ್ಕಾರಿ ನೌಕರರು ಮೂರು ವರ್ಷ ಕಡ್ಡಾಯವಾಗಿ ಗಡಿಭಾಗದಲ್ಲಿ ಸೇವೆಯನ್ನು ಸಲ್ಲಿಸಬೇಕು. ಗಡಿಭಾಗದಲ್ಲಿ ಉತ್ತಮ ಸಾರಿಗೆ ಸಂಪರ್ಕ ಆರೋಗ್ಯ ಕಲ್ಪಿಸಬೇಕು. ಅಲ್ಲಿಯ ನೈಸರ್ಗಿಕ ಸಂಪತ್ತುಗಳನ್ನು ಆಧರಿಸಿ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ಗಿರಿಜನರ ಅಭಿವೃದ್ಧಿಗೆ ಚಾಮರಾಜನಗರದಲ್ಲಿ ಅಭಿವೃದ್ಧಿ ಸಂಶೋಧನಾ ಕೇಂದ್ರ ಸ್ಥಾಪಿಸಬೇಕು. ಪ್ರತಿ ತಾಲೂಕಿನಲ್ಲಿ "ಕನ್ನಡ ಸಂಸ್ಕೃತಿ ಭವನ" ಸ್ಥಾಪಿಸಬೇಕು. ಕನ್ನಡ-ಕರ್ನಾಟಕ ಸಂಸ್ಕೃತಿಗೆ ದುಡಿದ ಗಡಿನಾಡ ಪ್ರತಿಭೆಗಳಿಗೆ ಅಕಾಡೆಮಿ, ಪ್ರಾಧಿಕಾರ ಪ್ರಶಸ್ತಿ ಕೊಡಬೇಕು. ಪ್ರೇಕ್ಷಣೀಯ ಸ್ಥಳಗಳ ಅಭಿವೃದ್ಧಿ ಮಾಡಬೇಕು. ಕರ್ನಾಟಕ ಗಡಿನಾಡು ಚಲನಚಿತ್ರ ಕಲಾ ಕೇಂದ್ರ ಸ್ಥಾಪನೆ ಆಗಬೇಕು. ಕೋಲಾರದಲ್ಲಿ, ಬೆಳಗಾವಿಯಲ್ಲಿ ಸಾಮಾಜಿಕ ಅಭಿವೃದ್ಧಿ ಸಂಶೋಧನಾ ಕನ್ನಡ ಕೇಂದ್ರ ಸ್ಥಾಪನೆ ಆಗಬೇಕು. ಗುಡಿ ಕೈಗಾರಿಕೆ, ಹೈನುಗಾರಿಕೆ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ ಒತ್ತು ಕೊಡಬೇಕು. ಸರ್ಕಾರಗಳು ಗಡಿ ಕನ್ನಡಿಗರ ಬಗ್ಗೆ ನಿರ್ಲಕ್ಷ್ಯ ವಹಿಸಿದರೆ ಅಖಂಡ ಕರ್ನಾಟಕದ ಪರಿಕಲ್ಪನೆ ಬರಿಯ ಕಲ್ಪನೆಯಾಗಿಯೇ ಉಳಿದುಬಿಡುತ್ತದೆ ಎಂಬುದನ್ನು ಮರೆಯಬಾರದು. ಬೈನಾ ಬೀಚಿನಲ್ಲಿ ಪರದೇಸಿಗಳಾದ ಕನ್ನಡಿಗರು ಗೋವಾದಲ್ಲಿರುವ ಬೈನಾ ಬೀಚಿನಲ್ಲಿಯೂ ಕನ್ನಡಿಗರು ನೆಲೆಸಿದ್ದು, ಇವರಲ್ಲಿ ಇದೀಗ ಅನಾಥ ಪ್ರಜ್ಞೆ ಕಾಡುತ್ತಿದೆ. ಹಲವು ವರ್ಷಗಳಿಂದ ಬೈನಾ ಬೀಚಿನಲ್ಲಿ ಕನ್ನಡಿಗರು ನೆಲೆಸಿದ್ದು, ಅವ-ರಿಗೆ ಸರ್ಕಾರವೇ ನೀಡಿರುವ ರೇಷನ್ ಕಾರ್ಡುಗಳಿವೆ, ವಿದ್ಯುತ್ ಸಂಪರ್ಕವಿದೆ, ನೀರಿನ ಸಂಪರ್ಕವಿದೆ. ಇಷ್ಟಿದ್ದೂ ಅವರ ವಸತಿಗಳನ್ನು ಸ್ಥಳೀಯ ಜಿಲ್ಲಾಡಳಿತ ನೆಲಸಮ ಮಾಡಿ ಆ ಕುಟುಂಬಗಳನ್ನು ನಿರ್ವಸತಿಕರನ್ನಾಗಿ ಮಾಡಿದೆ. ವಸತಿಗಳನ್ನು ಪೂರ್ಣವಾಗಿ ನೆಲಸಮ ಮಾಡುವವರೆಗೂ ಕರ್ನಾಟಕ ಸರ್ಕಾರವು ಗಡಿಭಾಗದ ಪೋಲೀಸ್ ಠಾಣೆಗಳ ಅಧಿಕಾರಿಗಳನ್ನು ಬೈನಾ ಬೀಚಿಗೆ ಕಳಿಸಿ ವರದಿ ತರಿಸಿಕೊಳ್ಳುವ ಕಣ್ಣೊರೆಸುವ ಕೆಲಸವನ್ನು ಮಾಡಿತು. ನೆಲಸಮ ಮಾಡುವ ಕೆಲಸ ಮುಗಿದ ನಂತರ ಉನ್ನತ ಶಿಕ್ಷಣ ಸಚಿವ ಆರ್ ವಿ. ದೇಶಪಾಂಡೆ ನೇತೃತ್ವದ ತಂಡವೊಂದು ಸ್ಥಳಕ್ಕೆ ಭೇಟಿ ನೀಡಿ ಬಂದಿತಾದರೂ, ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಅವರು ಗೋವಾದ ಆಂತರಿಕ ವ್ಯವಹಾರದಲ್ಲಿ ಕರ್ನಾಟಕ ತಲೆಹಾಕುವುದು ಸರಿಯಲ್ಲ ಎಂದರು. ದೇಶಪಾಂಡೆ ಅವರ ಮಾತು ಸತ್ಯವೇ ಆದರೂ, ಪರರಾಜ್ಯದಲ್ಲಿರುವ ನಮ್ಮವರ ರಕ್ಷಣೆ ಕೂಡ ನಮ್ಮದೇ ಹೊಣೆ ಎಂಬುದನ್ನು ಸರ್ಕಾರ ಮರೆಯಬಾರದು. ವಲಸೆಹೋದ ಕುಟುಂಬಗಳು ಈಗಲೂ ಕರ್ನಾಟಕದ ತಮ್ಮ ಮೂಲ ಹಳ್ಳಿಗಳಲ್ಲಿ ಕೃಷಿ ಭೂಮಿ ಹೊಂದಿವೆ. ಅವರ ಸಂಬಂಧಿಗಳು ಇಲ್ಲಿಯೇ ಇದ್ದಾರೆ. ಮಳೆಗಾಲದಲ್ಲಿ ಬಂದು ಇಲ್ಲಿನ ಕೃಷಿ ಭೂಮಿಯಲ್ಲಿ ಕೆಲಸ ಮಾಡಿ ವರ್ಷದ ಉಳಿದ ಭಾಗವನ್ನು ಬೈನಾ ಬೀಚಿನಲ್ಲಿ ಕಳೆಯುತ್ತವೆ. ಅವರ ಮಕ್ಕಳಲ್ಲಿ ಹೆಚ್ಚಿನವರ ವಿದ್ಯಾಭ್ಯಾಸ, ಉದ್ಯೋಗವು ಗೋವಾದಲ್ಲಿಯೇ ನಡೆಯುತ್ತದೆ. ಅವರಿಗೆ ಉತ್ತಮ ಆದಾಯ ನೀಡಬಲ್ಲ ಸರ್ಕಾರದ ಹಲವಾರು ಯೋಜನೆಗಳು ಉತ್ತರ ಕರ್ನಾಟಕದ ಭಾಗಗಳಲ್ಲಿ ಯಶಸ್ವಿಯಾಗಿಲ್ಲದಿರುವುದೂ ಆ ಕುಟುಂಬಗಳ ತೊಂದರೆಗಳಿಗೆ ಮೂಲಕಾರಣ. ಅಂದರೆ ವರ್ಷ ಪೂರ್ತಿ ಈ ವಲಸಿಗರಿಗೆ ಕರ್ನಾಟಕದಲ್ಲಿ ಕೆಲಸವಿಲ್ಲದಿರುವುದರಿಂದ ಮತ್ತು ಅವರ ಅಗತ್ಯಕ್ಕೆ ತಕ್ಕ ಆದಾಯವೂ ಇಲ್ಲಿ ಇಲ್ಲದಿರುವುದರಿಂದ ಗೋವಾದ ಬೈನಾ ಬೀಚಿನ ಬದುಕು ಅವರಿಗೆ ಹೆಚ್ಚು ಅಪ್ಯಾಯ ಮಾನವಾಗಿದೆ. ಕರ್ನಾಟಕ ಸರ್ಕಾರವು ಈ ಕುಟುಂಬಗಳ ಕಣ್ಣೊರೆಸುವ ಪ್ರಯತ್ನ ಮಾಡುವ ಬದಲು ಅವರಿಗೆ ಅವರ ಮೂಲ ಸ್ಥಳದಲ್ಲಿಯೇ ಉದ್ಯೋಗ ಮತ್ತು ಆದಾಯದ ಅವಕಾಶ ಒದಗಿಸುವ ಬಗ್ಗೆ ಯೋಚಿಸಿದರೆ ಈ ಅಂತಾರಾಜ್ಯ ಸಮಸ್ಯೆಗೆ ಪರಿಹಾರ ಸಿಗಬಹುದು.

# ದ್ವಿಚಕ್ರ ವಾಹನ, ಹಣ, ಮೊಬೈಲ್ ಕಳ್ಳತನ ಪ್ರಕರಣ ಭೇದಿಸಿದ ಪೊಲೀಸರು; ರೂ. 12.91 ಲಕ್ಷ ಮೌಲ್ಯದ ಸ್ವತ್ತು ವಶ, ಆರೋಪಿಗಳ ಬಂಧನ

ಅ.ಶ. ಸುದ್ದಿ ಕೊಪ್ಪಳ



ಕೊಪ್ಪಳ: ಜಿಲ್ಲೆಯ ಕೊಪ್ಪಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿದ್ದ ದ್ವಿಚಕ್ರ ವಾಹನ, ಹಣ ಮತ್ತು ಮೊಬೈಲ್ ಕಳ್ಳತನ ಪ್ರಕರಣಗಳನ್ನು ಕೊಪ್ಪಳ ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, ಈ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಿ, ರೂ. 12.91 ಲಕ್ಷ ಮೌಲ್ಯದ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೊಪ್ಪಳ ಜಿಲ್ಲಾ ಪೊಲೀಸ್ ವ-ರಿಷ್ಠಾಧಿಕಾರಿಗಳಾದ ಸಾಹಿಲ್ ಬಾಗ್ಲಾ ಅವರು ಹೇಳಿದರು.

ಕೊಪ್ಪಳ ಜಿಲ್ಲಾ ಪೊಲೀಸ್ ಅಧೀಕ್ಷಕರ ಕಾರ್ಯಾಲಯದ ಸಭಾಂಗಣದಲ್ಲಿ ಶುಕ್ರವಾರ (ಸೆ. 4) ಕರೆದ ಸುದ್ದಿಗೋಷ್ಠಿಯಲ್ಲಿ ಅವರು ವಿವರಗಳನ್ನು ಹಂಚಿಕೊಂಡರು.

*16 ದ್ವಿಚಕ್ರ ವಾಹನಗಳ ವಶ:*

ಕೊಪ್ಪಳ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಆವರಣದ ದ್ವಿ-ಚಕ್ರ ವಾಹನದ ಪಾರ್ಕಿಂಗ್ ಸ್ಥಳದಲ್ಲಿ ದಿನಾಂಕ: 21.08.2026 ರಂದು ಬೆಳಗ್ಗೆ 9-15 ಗಂಟೆಯಿಂದ ಸಂಜೆ 5 ಗಂಟೆಯ ನಡುವಿನ ಅವಧಿಯಲ್ಲಿ ಫಿರ್ಯಾದಿದಾರರು ಹ್ಯಾಂಡ್ ಲಾಕ್ ಮಾಡಿ ನಿಲ್ಲಿಸಿದ್ದ ಮೋಟಾರ್ ಸೈಕಲ್ ಅಂ.ಕಿ. ರೂ 90,000 ಬೆಲೆಬಾಳವನ್ನು ಯಾರೋ ಕಳ್ಳತನ ಮಾಡಿಕೊಂಡು ಹೋದ ಬಗ್ಗೆ ಗವಿಸಿದ್ದಪ್ಪ ಕೇರಿ ಸಾ: ಹಿರೆಕಾಸಕಂಡಿ ರವರು ನೀಡಿದ ದೂರಿನ ಮೇಲಿಂದ ದಿನಾಂಕ: 25.08.2026 ರಂದು ಕೊಪ್ಪಳ ನಗರ ಪೊಲೀಸ್ ಠಾಣೆ ಗುನ್ನೆ ನಂ. 113/2026 ಕಲಂ.303(2) ಭಾರತೀಯ ನ್ಯಾಯ ಸಂಹಿತೆ-2023 ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು.

ಈ ಪ್ರಕರಣದ ಪತ್ತೆ ಕುರಿತು ರಚಿಸಿದ ವಿಶೇಷ ತಂಡವು ತಕ್ಷಣ ಕಾರ್ಯ ಪ್ರವೃತ್ತರಾಗಿ ವಿವಿಧ ಆಯಾಮಗಳಿಂದ ಮಾಹಿತಿಯನ್ನು ಮತ್ತು ಸಾಕ್ಷಾಧಾರಗಳನ್ನು ಸಂಗ್ರಹಿಸಿ ಸಂಶಯಾಸ್ಪದ ವ್ಯಕ್ತಿ ಮೊಹಮ್ಮದ್ ಇರ್ಫಾನ್ ತಂದೆ ಖಾಜಾಹುಸೇನ್, ವಯ: 20ವರ್ಷ, ಉ: ಬೈಕ್ ಮೆಕ್ಯಾನಿಕ್, ಸಾ: ಕೌಲ್ ಬಜಾರ್, ಬಳ್ಳಾರಿ ಹಾ:ವಾ: ಹೊಸಪೇಟೆ, ವಿಜಯನಗರ ಜಿಲ್ಲೆ. ಎಂಬುವವನನ್ನು ಪತ್ತೆ ಮಾಡಿ ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಮೋಟಾರ್ ಸೈಕಲ್‌ಗಳನ್ನು ಕಳ್ಳತನ ಮಾಡಿರುವದಾಗಿ ಒಪ್ಪಿಕೊಂಡಿದ್ದು, ಆಪಾದಿತ ವ್ಯಕ್ತಿಯನ್ನು ದಸ್ತಗಿರಿ ಮಾಡಿ, ಅವನಿಂದ ಅಂದಾಜು ಕಿಮ್ಮತ್ತು 11,90,000 ರೂ. ಬೆಲೆಬಾಳುವ ವಿವಿಧ ಕಂಪನಿಯ 16 ಮೋಟಾರ್ ಸೈಕಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯ ಕೊಪ್ಪಳ ಉಪ-ವಿಭಾಗ, ಕೊಪ್ಪಳ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿಯ ಕೊಪ್ಪಳ ನಗರದ ಹೊಸಪೇಟೆ ರಸ್ತೆಯ ಕೊಪ್ಪಳ ಜಿಲ್ಲಾ ಬೋಧಕ ಆಸ್ಪತ್ರೆಯಲ್ಲಿ ದಿನಾಂಕ: 14-07-2026 ರಂದು ರಾತ್ರಿ 11 ಗಂಟೆಯಿಂದ ದಿನಾಂಕ: 29-07-2026 ರಂದು ಬೆಳಗ್ಗೆ 10-30 ಗಂಟೆಯ ನಡುವಿನ ಅವಧಿಯಲ್ಲಿ ತನ್ನ ಮಗಳ ಚಿಕಿತ್ಸೆಗೆಂದು ಬಂದಿದ್ದ ಫಿರ್ಯಾದಿದಾರರ ಮೊಬೈಲ್ ಕಳ್ಳತನ ಮಾಡಿ, ಆ ಮೊಬೈಲ್‌ನ ಬ್ಯಾಕ್ ಕವರ್‌ನಲ್ಲಿದ್ದ ಎ.ಟಿ.ಎಮ್ ಕಾರ್ಡ್‌ನಿಂದ ರೂ. 99,500 ಗಳನ್ನು ಬಿಡಿಸಿಕೊಂಡ ಬಗ್ಗೆ ದಿನಾಂಕ: 09-08-2026 ರಂದು ಸೀಮಣ್ಣ ಗಬ್ಬೂರು ರವರು ನೀಡಿದ ದೂರಿನ ಮೇಲಿಂದ ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ:105/2026 ಕಲಂ:303(2) ಬಿ.ಎನ್.ಎಸ್-2023 ರನ್ವಯ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು.

ಈ ಪ್ರಕರಣದ ಪತ್ತೆ ಕುರಿತು ರಚಿಸಿದ ವಿಶೇಷ ತಂಡವು ತಕ್ಷಣ ಕಾರ್ಯ ಪ್ರವೃತ್ತರಾಗಿ ವಿವಿಧ ಆಯಾಮಗಳಿಂದ ಮಾಹಿತಿಯನ್ನು ಮತ್ತು ಸಾಕ್ಷಾಧಾರಗಳನ್ನು ಸಂಗ್ರಹಿಸಿ ಸಂಶಯಾಸ್ಪದ ವ್ಯಕ್ತಿ ಮಂಜುನಾಥ ತಂದೆ ಚಿನ್ನಪ್ಪ ಚಕ್ರಸಾಲಿ ವಯ: 32ವರ್ಷ, ಉ: ಹೋಟೆಲ್ ಕೆಲಸ, ಸಾ: ಬೂದಗುಂಪಾ ಎಂಬುವವನನ್ನು ಪತ್ತೆ ಮಾಡಿ ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ ಮೋಟಾರ್ ಸೈಕಲ್‌ಗಳನ್ನು ಕಳ್ಳತನ ಮಾಡಿಕೊಂಡಿರುವದಾಗಿ ಒಪ್ಪಿಕೊಂಡಿದ್ದು, ಆಪಾದಿತ ವ್ಯಕ್ತಿಯನ್ನು ದಸ್ತಗಿರಿ ಪತ್ತೆ ಮಾಡಿ, ಈ ಆರೋಪಿತನಿಂದ ರೂ. 99,500 ಮತ್ತು ಒಂದು ಓಪ್ಪೋ ಮೊಬೈಲ್ ಫೋನ್‌ನ್ನು ಜಪ್ತಿಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಎಲ್ಲಾ ಪ್ರಕರಣಗಳ ಪತ್ತೆ ಕುರಿತು ಜಿಲ್ಲಾ ಪೊಲೀಸ್ ಅಧೀಕ್ಷಕರು, ಹೆಚ್ಚುವರಿ ಎಸ್.ಪಿ ಮತ್ತು ಡಿ.ವೈಎಸ್.ಪಿ ಕೊಪ್ಪಳ ರವರ ಮಾರ್ಗದರ್ಶನದಲ್ಲಿ ಕೊಪ್ಪಳ ನಗರ ಠಾಣೆಯ ಪಿ.ಐ. ಮತ್ತು ಪಿ.ಎಸ್.ಐ (ಕಾಹಿಸು) ಹೀರಪ್ಪ, ಎ.ಎಸ್.ಐ ಶಂಕ್ರಯ್ಯ ಸಾರಂಗಮಠ, ಸಿಬ್ಬಂದಿಯವರಾದ ಹೆಚ್‌ಸಿ ಖಾಜಾಸಾಬ, ಗಂಗಾಧರ, ಗಣೇಶ ಮತ್ತು ಸಿಪಿಸಿ ರವರಾದ ಮಂಜುನಾಥ, ಮಂಗಳೇಶ, ಗೂಡಸಾಬ, ಮಲ್ಲಿಕಾರ್ಜುನ, ತನಿಖಾ ಸಹಾಯಕರಾದ ಕುಮಾರಸ್ವಾಮಿ, ಲಕ್ಷ್ಮಿದೇವಿ ಕೆ. ಮಪಿಸಿ, ಬಸಯ್ಯ, ಶಂಕ್ರಪ್ಪ ಎಪಿಸಿ ಮತ್ತು ಡಿಪಿಓ ತಾಂತ್ರಿಕ ವಿಭಾಗದ ಪ್ರಸಾದ್ ಎಪಿಸಿ, ಮಂಜುನಾಥ ಎಪಿಸಿ ಇವರನ್ನೊಳಗೊಂಡ ವಿಶೇಷ ತಂಡ ರಚಿಸಲಾಗಿತ್ತು ಎಂದರು.

ಈ ಎರಡು ಸ್ವತ್ತಿನ ಪ್ರಕರಣದಲ್ಲಿ ಆಪಾದಿತರನ್ನು ಪತ್ತೆ ಮಾಡಿ, ರೂ. 11,90,000 ಮೌಲ್ಯದ 16 ಮೋಟಾರ್ ಸೈಕಲ್, ರೂ. 2000 ಮೌಲ್ಯದ ಮೊಬೈಲ್ ಮತ್ತು 99,500 ರೂ. ನಗದು ಹಣ ಒಟ್ಟು 12,91,500 ಮೌಲ್ಯದ ಕಳ್ಳತನವಾದ ಸ್ವತ್ತು ನಗದು ಹಣ ವಶಪಡಿಸಿಕೊಂಡು, ಪ್ರಕರಣವನ್ನು ಪತ್ತೆ ಮಾಡಿ, ಉತ್ತಮ ಪತ್ತೆ ಕಾರ್ಯ ಮಾಡಿದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯವರ ತಂಡದ ಕಾರ್ಯಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಸಾಹಿಲ್ ಬಾಗ್ಲಾ ಅವರು ಇದೇ ವೇಳೆ ಪ್ರಶಂಸೆ ವ್ಯಕ್ತಪಡಿಸಿದರು.

# ನಾಳೆ ಸಂಶೋಧಕ ದಿ. ಬಿ.ಸಿ. ಪಾಟೀಲರ ಸಮಗ್ರ ಕೃತಿಗಳ 'ಭರಮ ಸಿರಿ' ಬಿಡುಗಡೆ

ಅ.ಶ. ಸುದ್ದಿ ಕೊಪ್ಪಳ




ಕೊಪ್ಪಳ ಶಿಕ್ಷಣ, ಇತಿಹಾಸ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿರುವ ಹಿರಿಯ ಸಂಶೋಧಕ ದಿ. ಬಿ.ಸಿ. ಪಾಟೀಲರ ಎಲ್ಲಾ ಕೃತಿಗಳನ್ನೊಳಗೊಂಡ 'ಭರಮ ಸಿರಿ: ಬಿ.ಸಿ. ಪಾಟೀಲರ ಸಮಗ್ರ ಕೃತಿಗಳು' ಎಂಬ ಸಮಗ್ರ ಸಂಪುಟವನ್ನು ಹೊರತರಲಾಗುತ್ತಿದೆ ಇದರ ಉದ್ಘಾಟನೆ ಹಾಗೂ ಪುಸ್ತಕ ಗ್ರಂಥ ಬಿಡುಗಡೆ ಸಮಾರಂಭ ದಿ,6 ರ ರವಿವಾರ ಬೆಳಿಗ್ಗೆ ಜರುಗಲಿದೆ ಎಂದು ಪುರಾತತ್ವ ಇಲಾಖೆಯ ನಿವೃತ್ತ ಉಪ ಅಧೀಕ್ಷಕ ಸಿ ಬಿ ಪಾಟೀಲ್ ತಿಳಿಸಿದರು,

ಅವರು ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ಏರ್ಪಡಿಸಿದ ಮಾಧ್ಯಮದೊಂದಿಗೆ ಮಾತನಾಡಿ 2024ರಲ್ಲಿ ಸ್ಥಾಪಿತವಾದ 'ಬಿ.ಸಿ. ಪಾಟೀಲ ಟ್ರಸ್ಟ್' ಮತ್ತು 'ಸುದರ್ಶನ ಪಾಟೀಲ ಫೌಂಡೇಷನ್' ಸಂಯುಕ್ತವಾಗಿ ಈ ಗ್ರಂಥವನ್ನು ಪ್ರಕಟಿಸುತ್ತಿದ್ದು, ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ತಮ್ಮ ಆಶೀರ್ವಚನದ ನುಡಿಗಳನ್ನು ನೀಡಿದ್ದಾರೆ ಅಲ್ಲದೆ ಸಮಾರಂಭದ ದಿವ್ಯ ಸಾನಿಧ್ಯವನ್ನು ಕೂಡ ಅವರು ವಹಿಸಿ ಆಶೀರ್ವಚನ ನೀಡಲಿದ್ದಾರೆ ಎಂದು ವಿವರಿಸಿದರು, ಹಂಪಿ ವಿಶ್ವವಿದ್ಯಾಲಯದ ಕುಲಪತಿ ಡಾ, ಡಿ,ವಿ ಪರಮಶಿವಮೂರ್ತಿ ಉದ್ಘಾಟಿಸಿ ಬಿಡುಗಡೆಗೊಳಿಸಲಿದ್ದಾರೆ, ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರಾದ ಡಾ, ದೇವರಕೊಂಡ ರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ, ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು,

ಮುಂದುವರೆದು ಮಾತನಾಡಿ ಬಿಸಿ ಪಾಟೀಲರು 1976ರಲ್ಲಿ ಮುಖ್ಯೋಪಾಧ್ಯಾಯರಾಗಿ ನಿವೃತ್ತರಾದ ಅವರು, ನಿವೃತ್ತಿಯ ನಂತರ ತಮ್ಮನ್ನು ಪೂರ್ಣಪ್ರಮಾಣದಲ್ಲಿ ಇತಿಹಾಸ ಹಾಗೂ ಸಾಹಿತ್ಯ ಸಂಶೋಧನೆಗೆ ಸಮರ್ಪಿಸಿಕೊಂಡಿದ್ದರು. 'ಕೊಪ್ಪಳ: ಸಾಂಸ್ಕೃತಿಕ ಪರಂಪರೆ', 'ಮಾದಿನೂರು ನೆನಪು', 'ಸಿಂದೋಗಿ ಚರಿತೆ', 'ಕೊಪ್ಪಳದ ಹೆಚ್ಚಿನ ಶಾಸನಗಳು', 'ಮಹಾದೇವ ದೇವಾಲಯ' ಮುಂತಾದ ಪ್ರಮುಖ ಇತಿಹಾಸ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. ಇದಲ್ಲದೆ 'ಮೊಗ್ಗುಗಳು' ಮತ್ತು 'ಬೆಳಕು' ಕವನ ಸಂಕಲನಗಳು ಹಾಗೂ 'ಕಾಯಕಯೋಗಿ ಬಸವಣ್ಣ', 'ವರಕವಿ', 'ಶ್ರೀ. ಮ.ನಿ.ಪ್ರ. ಶ್ರೀಗವಿಸಿದ್ದೇಶ್ವರರು' ನಾಟಕಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ.

ಅವರ ಸಾಹಿತ್ಯಿಕ ಕೊಡುಗೆಯನ್ನು ಗುರುತಿಸಿ ಕೊಪ್ಪಳ ನಗರಸಭೆಯು ಹಳೇ ಜಿಲ್ಲಾಸ್ಪತ್ರೆಯ ಮುಂದಿನ ರಸ್ತೆಗೆ 'ಸಾಹಿತಿ ಸಂಶೋಧಕ ಬಿ.ಸಿ. ಪಾಟೀಲ ರಸ್ತೆ' ಎಂದು ಈಗಾಗಲೇ ನಾಮಕರಣ ಮಾಡಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರ ಕುರಿತಾಗಿ ಎಂ.ಫಿಲ್ ಸಂಶೋಧನಾ ಪ್ರಬಂಧ ಮಂಡನೆಯಾಗಿದ್ದು, 2015ರಲ್ಲಿ ಅವರ ಸಂಸ್ಮರಣ ಗ್ರಂಥ 'ಚೈತನ್ಯಶೀಲ ಸಂಶೋಧಕ' ಪ್ರಕಟವಾಗಿತ್ತು.

94 ವರ್ಷಗಳ ಸಾರ್ಥಕ ಜೀವನ ನಡೆಸಿ 2011ರಲ್ಲಿ ಶಿವೈಕ್ಯರಾದ ಬಿ.ಸಿ. ಪಾಟೀಲರ ಜ್ಞಾನದ ಅಮೂಲ್ಯ ಕೊಡುಗೆಯನ್ನು ಸ್ಮರಿಸಿ ಅವರ ಸ್ಮೃತಿಗೆ 'ಜ್ಞಾನಜ್ಯೋತಿ' ಎಂದು ಗೌರವಿಸಲಾಗಿದೆ. ಅವರ ಧರ್ಮಪತ್ನಿ ದಿ. ಸುಮಂಗಲಾದೇವಿ ಪಾಟೀಲರ ಸ್ಮೃತಿಗೆ 'ಅನ್ನಜ್ಯೋತಿ' ಹಾಗೂ ಅಕಾಲಿಕವಾಗಿ ಅಗಲಿದ ಅವರ ಪುತ್ರ ಉದ್ಯಮಿ ದಿ. ಸುದರ್ಶನಗೌಡ ಪಾಟೀಲರ ಸ್ಮೃತಿಗೆ 'ಯುವಜ್ಯೋತಿ' ಎಂದು ನಾಮಕರಣ ಮಾಡಲಾಗಿದೆ.

ಸಂಶೋಧಕರು ಮತ್ತು ಇತಿಹಾಸಾಸಕ್ತರಿಗೆ ಲಭ್ಯವಾಗದಿದ್ದ ಪಾಟೀಲರ ಎಲ್ಲ ಅಪರೂಪದ ಕೃತಿಗಳನ್ನು ಯಾವುದೇ ಬದಲಾವಣೆ ಮಾಡದೆ, ಮೂಲ ಸ್ವರೂಪದಲ್ಲೇ ಮರುಮುದ್ರಣಗೊಳಿಸಿ ಒಂದೇ ಸಂಪುಟವಾಗಿ ಸಾರ್ವಜನಿಕರಿಗೆ ತಲುಪಿಸಲಾಗುತ್ತಿದೆ ದಿ, 6 ರ ರವಿವಾರದಂದು ಜರುಗುವ ಕಾರ್ಯಕ್ರಮಕ್ಕೆ ಸರ್ವರೋ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕರ್ಮ ಯಶಸ್ವಿಗೊಳಿಸುವಂತೆ ಪತ್ರಿಕಾಗೋಷ್ಠಿಯಲ್ಲಿ ಹಾಗೂ ಹೆಚ್ಚಿನ ಮಾಹಿತಿಗಾಗಿ ತಮಗೆ ಸಂಪರ್ಕಿಸುವಂತೆ ನಿವೃತ್ತ ಉಪಪುರಾತತ್ವ ಅಧೀಕ್ಷಕ ಸಿ.ಬಿ. ಪಾಟೀಲ (ದೂರವಾಣಿ: 9900831212) ಸಂಪರ್ಕಿಸಬಹುದು ಎಂದು ತಿಳಿಸಿದರು,

ಪತ್ರಿಕಾಗೋಷ್ಠಿಯಲ್ಲಿ ಎಸ್ ಬಿ ಪಾಟೀಲ್,

# ಮಹಿಳಾ ಪಿಎಐಗೆ ಕಪಾಳಮೋಕ್ಷ ಪ್ರಕರಣ

ಅ.ಶ. ಸುದ್ದಿ ಮಂಡ್ಯ




**ಮಂಡ್ಯ:** ಕರ್ತವ್ಯದಲ್ಲಿದ್ದ ಮಹಿಳಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗೆ ಕಪಾಳಮೋಕ್ಷ ಮಾಡಿದ ಆರೋಪ ಎದುರಿಸುತ್ತಿರುವ ತುಮಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡ ಅವರ ಪುತ್ರಿ ಐಶ್ವರ್ಯಾಗೆ ನಿರೀಕ್ಷಣಾ ಜಾಮೀನು ನೀಡಲು ಸೆಷನ್ಸ್ ನ್ಯಾಯಾಲಯ ನಿರಾಕರಿಸಿದೆ. ಪ್ರಕರಣದಲ್ಲಿ ನಿರೀಕ್ಷಣಾ ಜಾಮೀನು ಕೋರಿ ಐಶ್ವರ್ಯಾ ಅವರು ಶ್ರೀರಂಗಪಟ್ಟಣದ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅದರ ವಿಚಾರಣೆ ನಡೆಸಿದ ಕೋರ್ಟ್, ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ. ಘಟನೆಗೆ ಸಂಬಂಧಿಸಿದಂತೆ ಪಿಎಸ್‌ಐ ಸವಿತಾ ಬಿ.ಪಾಟೀಲ್ ನೀಡಿದ ದೂರಿನ ಆಧಾರದ ಮೇಲೆ ಕ್ಯಾತನಹಳ್ಳಿ ಪೊಲೀಸ್ ಠಾಣೆಯಲ್ಲಿ ಐಶ್ವರ್ಯಾ ವಿರುದ್ಧ ಪ್ರಕರಣ ದಾಖಲಾಗಿತ್ತು. ಸರ್ಕಾರಿ ನೌಕರನ ಕರ್ತವ್ಯಕ್ಕೆ ಅಡ್ಡಿಪಡಿಸುವುದು, ಗಾಯಗೊಳಿಸುವುದು, ಉದ್ದೇಶಪೂರ್ವಕ ಅವಮಾನ ಮತ್ತು ಕ್ರಿಮಿನಲ್ ಬೆದರಿಕೆ ಸೇ-ರಿದಂತೆ ಭಾರತೀಯ ನ್ಯಾಯ ಸಂಹಿತೆಯ (ಃಓಖ) ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿದೆ. ಇದೇ ವೇಳೆ, ಐಶ್ವರ್ಯಾ ಕೂಡ ಪೊಲೀಸ್ ಅಧಿಕಾರಿಯ ವಿರುದ್ಧ ಪ್ರತಿ-ದೂರು ನೀಡಿದ್ದಾರೆ. ಪೊಲೀಸ್ ಅಧಿಕಾರಿಯೇ ತಮ್ಮೊಂದಿಗೆ ಅನುಚಿತವಾಗಿ ವರ್ತಿಸಿದ್ದರು ಎಂದು ಅವರು ಆರೋಪಿಸಿದ್ದಾರೆ. ಎರಡೂ ಪ್ರಕರಣಗಳ ಕುರಿತು ತನಿಖೆ ನಡೆಯುತ್ತಿದೆ ಎಂದು ಮಂಡ್ಯ ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಆಗಸ್ಟ್ 12ರಂದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಅರತಿ ಉಕ್ಕಡದ ಮಾರಮ್ಮ ದೇವಾಲಯದಲ್ಲಿ ಭೀಮ ಅಮಾವಾಸ್ಯೆ ಹಿನ್ನೆಲೆಯಲ್ಲಿ ಭಕ್ತರ ಭಾರಿ ದಟ್ಟಣೆ ಇತ್ತು. ಜನಸಂದಣಿ ನಿಯಂತ್ರಣಕ್ಕಾಗಿ ಮಂಡ್ಯ ಮಹಿಳಾ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಸವಿತಾ ಬಿ.ಪಾಟೀಲ್ ಅವರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ದರ್ಶನಕ್ಕಾಗಿ ಬಂದಿದ್ದ ಐಶ್ವರ್ಯಾ ಅವರು ಸರತಿ ಸಾಲಿನಲ್ಲಿ ಕಾಯದೆ ದೇವಾಲಯದ ಗರ್ಭಗುಡಿಗೆ ತೆರಳಲು ಮುಂದಾದಾಗ ಸವಿತಾ ಅವರು ತಡೆದಿದ್ದಾರೆ ಎಂದು ಆರೋಪಿಸಲಾಗಿದೆ.

ಇದರಿಂದ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಬಳಿಕ ಐಶ್ವರ್ಯಾ ಅವರು ಪೊಲೀಸ್ ಅಧಿಕಾರಿಗೆ ಕಪಾಳಮೋಕ್ಷ ಮಾಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.

ಕ್ಷಮೆ ಕೇಳಿದ್ದ ಶಾಸಕ ಸುರೇಶ್‌ಗೌಡ : ಘಟನೆ ವಿವಾದಕ್ಕೆ ಕಾರಣವಾದ ಬಳಿಕ ಶಾಸಕ ಸುರೇಶ್‌ಗೌಡ ಅವರು ತಮ್ಮ ಪುತ್ರಿಯ ವರ್ತನೆಗೆ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದರು. ದೇವಾಲಯಗಳು ಶಾಂತಿಯ ಸ್ಥಳವಾಗಿದ್ದು, ಅಲ್ಲಿ ಯಾವುದೇ ರೀತಿಯ ಅಹಿತಕರ ವರ್ತನೆಯನ್ನು ಸಮರ್ಥಿಸಲು ಸಾಧ್ಯವಿಲ್ಲ ಎಂದು ಹೇಳಿದ್ದರು. ಯಾರೇ ಆಗಿರಲಿ ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ. ಕಾನೂನು ಏನಿದೆ ಅದನ್ನು ನಾವು ಎದುರಿಸುತ್ತೇವೆ. ಸಾರ್ವಜನಿಕ ಮತ್ತು ಧಾರ್ಮಿಕ ಸ್ಥಳಗಳಲ್ಲಿ ವಿಐಪಿ ಪ್ರೋಟೋಕಾಲ್ ವ್ಯವಸ್ಥೆಯನ್ನು ತೆಗೆದುಹಾಕಬೇಕು. ದೇವರ ಮುಂದೆ ನಾವೆಲ್ಲರೂ ಸಮಾನರು. ಈ ವಿಚಾರವನ್ನು ಇಲ್ಲಿಗೆ ಬಿಟ್ಟುಬಿಡಿ, ಅನಗತ್ಯವಾಗಿ ಬೆಳೆಸಬೇಡಿ ಎಂದು ಮನವಿ ಮಾಡಿದ್ದರು

# ಕೊಪ್ಪಳ ಗಡಿ ಪ್ರವೇಶಿಸಿದ ಬಿಜೆಪಿ ಪಾದಯಾತ್ರೆ: ಚನ್ನಳ್ಳಿ ಕ್ರಾಸ್‌ನಲ್ಲಿ ಭವ್ಯ ಸ್ವಾಗತ



ಅ.ಶ. ಸುದ್ದಿ ಕೊಪ್ಪಳ

ಕಾರಟಗಿ: ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಹಮ್ಮಿಕೊಂಡಿರುವ ಲಿಂಗಸಗೂರು- ಬಳ್ಳಾರಿ ಚಲೋ ಬೃಹತ್ ಪಾದಯಾತ್ರೆ ಶುಕ್ರವಾರ (ಸೆ.04) ಸಂಜೆ ಐದು ಗಂಟೆಗೆ ಕೊಪ್ಪಳ ಜಿಲ್ಲೆಯ ಗಡಿ ಪ್ರವೇಶಿಸಿ, ಕಾರಟಗಿ ತಾಲೂಕಿನ ಚನ್ನಳ್ಳಿ ಕ್ರಾಸ್‌ನಲ್ಲಿ ಬಿಜೆಪಿ ಕಾರ್ಯಕರ್ತರು ಹಾಗೂ ಸಾರ್ವಜನಿಕರಿಂದ ಭವ್ಯ ಸ್ವಾಗತ ದೊರೆಯಿತು. ರಾಯಚೂರು ಜಿಲ್ಲೆಯ ಸಿಂಧನೂರು ಕಡೆಯಿಂದ ಪಾದಯಾತ್ರೆ ಚನ್ನಳ್ಳಿ ಕ್ರಾಸ್‌ಗೆ ಆಗಮಿಸುತ್ತಿದ್ದಂತೆ ರಸ್ತೆಯುದ್ದಕ್ಕೂ ಜನರು ಕಾದು ನಿಂತು ಬಿಜೆಪಿ ಮುಖಂಡರು ಹಾಗೂ ಪಾದಯಾತ್ರಿಕರನ್ನು ಅದ್ದೂರಿಯಾಗಿ ಬರ ಮಾಡಿಕೊಂಡರು. ಮಹಿಳೆಯರು ಕುಂಭ-ಕಳಶ ಹೊತ್ತು ಸ್ವಾಗತಿಸಿದರು. ಪಾದಯಾತ್ರೆಯ ಹಿನ್ನೆಲೆಯಲ್ಲಿ ಚನ್ನಳ್ಳಿ ಕ್ರಾಸ್ ಸೇರಿದಂತೆ ಮಾರ್ಗದುದ್ದಕ್ಕೂ ಬಿಜೆಪಿ ಧ್ವಜ ಹಾಗೂ ಬ್ಯಾನರ್ ಪಾದಯಾತ್ರಿಕರ ಸ್ವಾಗತ ಕೋರಿದವು. ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದ ನಾಯಕರಿಗೆ ಕು-ರಿಮರಿ ಕಾಣಿಕೆ ನೀಡಿ ಗೌರವಿಸಲಾಯಿತು. ಬಳಿಕ ಕ್ರೇನ್ ಮೂಲಕ ಬೃಹತ್ ಹೂವಿನ ಹಾರ ಹಾಕಿ ಮುಖಂಡರಿಗೆ ಸ್ವಾಗತ ಕೋರಲಾಯಿತು. ಭರ್ಜರಿ ಪಟಾಕಿ ಸಿಡಿಸಿ ಕಾರ್ಯಕರ್ತರು ಸಂಭ್ರಮಿಸಿದರು. ಸ್ವಾಗತ ಕಾರ್ಯಕ್ರಮಕ್ಕೆ ವಿವಿಧ ಕಲಾ ತಂಡಗಳ ಪ್ರದರ್ಶನ ಮತ್ತಷ್ಟು ಮೆರುಗು ನೀಡಿತು. ವೀರಗಾಸೆ, ಡೊಳ್ಳು ಕುಣಿತ, ಹಲಗೆ ಬಡಿತ, ಹೆಜ್ಜೆ ನಾದ ಸೇ-ರಿದಂತೆ ವಿವಿಧ ಕಲಾ ತಂಡಗಳು ನೃತ್ಯ ಪ್ರದರ್ಶಿಸಿದವು. ಕಲಾವಿದರ ನೃತ್ಯ ಪ್ರದರ್ಶನಕ್ಕೆ ಸಾರ್ವಜನಿಕರು ಹಾಗೂ ಕಾರ್ಯಕರ್ತರು ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ಪಾದಯಾತ್ರೆ ಸಾಗುವ ರಸ್ತೆಯ ಉದ್ದಕ್ಕೂ ಜನವೋ ಜನ ಕಂಡುಬಂದಿದ್ದು, ಕಾರ್ಯಕರ್ತರು ಉತ್ಸಾಹದಿಂದ ಜೈ ಶ್ರೀರಾಮ್ ಘೋಷಣೆಗಳು ಮೊಳಗಿದವು. ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದ ಕಾರ್ಯಕರ್ತರು ಬಿಜೆಪಿಗೆ ಜೈಕಾರ ಹಾಕಿದರು.ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ನಡೆಯುತ್ತಿರುವ ಬಳ್ಳಾರಿ ಚಲೋ ಪಾದಯಾತ್ರೆ ಲಿಂಗಸುಗೂರಿನಿಂದ ಆರಂಭಗೊಂಡಿದ್ದು, ರಾಯಚೂರು ಜಿಲ್ಲೆಯ ವಿವಿಧ ಭಾಗಗಳಲ್ಲಿ ಸಂಚರಿಸಿ ನಾಲ್ಕನೇ ದಿನವಾದ ಶುಕ್ರವಾರ ಕೊಪ್ಪಳ ಜಿಲ್ಲೆಯನ್ನು ಪ್ರವೇಶಿಸಿತು. ಪಾದಯಾತ್ರೆಯಲ್ಲಿ ಗೋವಿಂದ ಕಾರಜೋಳ, ಶ್ರೀರಾಮುಲು, ರಾಜುಗೌಡ, ಬಸವರಾಜ ದಡೆಸಗೂರು ಸೇರಿದಂತೆ ಬಿಜೆಪಿ ಮುಖಂಡರು, ಜನಪ್ರತಿನಿಧಿಗಳು ಹಾಗೂ

# ಚುನಾಯಿತ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ವಿರುದ್ಧದ ದೂರು ಖಂಡನೀಯ: ಬಂಗ್ಲೆ ಮಲ್ಲಿಕಾರ್ಜುನ ವಿರುದ್ಧ ಕ್ರಮಕ್ಕೆ ಆಗ್ರಹ

ಅ.ಶ. ಸುದ್ದಿ ಕೊಪ್ಪಳ



ಡಿ.ವಿ. ಗುಂಡಪ್ಪನವರು ಸ್ಥಾಪಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಇಂದು 95 ವಸಂತಗಳು ತುಂಬಿದ್ದು, ರಾಜ್ಯದ ಎಲ್ಲಾ ಜಿಲ್ಲೆ ಹಾಗೂ ತಾಲೂಕು ಘಟಕಗಳನ್ನು ಹೊಂದಿರುವ ಈ ಸಂಘದಲ್ಲಿ ಸುಮಾರು ಹತ್ತು ಸಾವಿರ ಸಕ್ರಿಯ ಪತ್ರಕರ್ತರು ಸದಸ್ಯರಾಗಿದ್ದಾರೆ.

ದೇಶದ ಬೃಹತ್ ಹಾಗೂ ನೈಜ ಪತ್ರಕರ್ತರ ಸಂಘಟನೆಯಾದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚುನಾಯಿತ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ವಿರುದ್ಧ ನಡೆಯುತ್ತಿರುವ ಕುತಂತ್ರ ಖಂಡನೀಯ ಎಂದು ಕುಕನೂರು ತಾಲೂಕು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ನಾಗರಾಜ ಬೆಣಕಲ್ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ವಿರುದ್ಧ ಇತ್ತೀಚೆಗೆ ಸ್ವಯಂಘೋಷಿತ ಅಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ನೇತೃತ್ವದಲ್ಲಿ 'ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ' ಹೆಸರಿನಲ್ಲಿ ದೂರು ಸಲ್ಲಿಸಿರುವ ಕ್ರಮ ಸರಿಯಲ್ಲ ಎಂದು ಅವರು ಹೇಳಿದರು.

ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಘಟನೆಯೊಂದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಕ್ಷಮೆಯಾಚಿಸಿ ವಿವಾದದಿಂದ ಹೊರಬಂದಿರುವ ಹಿನ್ನೆಲೆಯ ಬಂಗ್ಲೆ ಮಲ್ಲಿಕಾರ್ಜುನ ಅವರು, ಇದೀಗ ಪತ್ರಕರ್ತರ ಸಂಘಟನೆಯ ಹೆಸರಿನಲ್ಲಿ ನಮ್ಮ ಸಂಘದ ವಿರುದ್ಧ ಕುತಂತ್ರ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಸಂಘದಿಂದ ಸದಸ್ಯತ್ವ ನೀಡಲು ನಿರಾಕ-ರಿಸಲ್ಪಟ್ಟವರನ್ನು ಒಟ್ಟುಗೂಡಿಸಿಕೊಂಡು ಸಂಘದ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಇಂತಹವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತನ್ನೂ ನೀಡುವ ಅಗತ್ಯವಿಲ್ಲ ಎಂದು ನಾಗರಾಜ ಬೆಣಕಲ್ ಹೇಳಿದರು.

ರಂಗಭೂಮಿ ಕ್ಷೇತ್ರದಿಂದ ಬೆಳೆದು ಬಂದಿರುವ ಶಿವಾನಂದ ತಗಡೂರು ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ದೊರೆತಿರುವುದನ್ನು ಸಹಿಸದೆ, ಕೆಲವರು ಹೊಟ್ಟೆಕಿಚ್ಚಿನಿಂದ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

***ಪತ್ರಕರ್ತರ ಕಲ್ಯಾಣಕ್ಕಾಗಿ ತಗಡೂರು ಕೊಡುಗೆ ಅಪಾರ***

ಶಿವಾನಂದ ತಗಡೂರು ಅವರ ನೇತೃತ್ವದಲ್ಲಿ ಸಂಘದ ಕ್ಷೇಮಾಭಿವೃದ್ಧಿ ನಿಧಿಗಾಗಿ ಸುಮಾರು ?1.1 ಕೋಟಿ ಠೇವಣಿ ಮಾಡಲಾಗಿದೆ. ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ನೂರಾರು ಪತ್ರಕರ್ತರ ಕುಟುಂಬಗಳಿಗೆ ತಲಾ ?5 ಲಕ್ಷ ಪರಿಹಾರ ದೊರಕಿಸುವಲ್ಲಿ ಅವರು ನಡೆಸಿದ ಪ್ರಯತ್ನವನ್ನು ಯಾರೂ ಮರೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಸರ್ಕಾರದ ಅನೇಕ ಕಾರ್ಯಕ್ರಮಗಳಲ್ಲಿ ಸಹಯೋಗ ಹೊಂದಿದ್ದು, ಸರ್ಕಾರದ ಮಾನ್ಯತೆ ಪಡೆದ ಪ್ರಮುಖ ಪತ್ರಕರ್ತರ ಸಂಘಟನೆಯಾಗಿದೆ. ಇಂತಹ ನೈಜ ಪತ್ರಕರ್ತರ ಸಂಘಟನೆಯ ಚುನಾಯಿತ ರಾಜ್ಯಾಧ್ಯಕ್ಷರ ವಿರುದ್ಧ ಸಲ್ಲಿಸಿರುವ ದೂರನ್ನು ಮಾನ್ಯ ಮಾಡಬಾರದು ಎಂದು ಅವರು ಆಗ್ರಹಿಸಿದರು.

ಉದ್ದೇಶಪೂರ್ವಕವಾಗಿ ಶಿವಾನಂದ ತಗಡೂರು ಅವರ ತೇಜೋವಧೆ ಮಾಡುತ್ತಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಂಡು ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ತಹಶೀಲ್ದಾರರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾ ಸಮಿತಿ ಸದಸ್ಯರಾದ ಅಲ್ಲಾವುದ್ದೀನ್ ಎಮ್ಮಿ, ಬಸವರಾಜ ಕೊಡ್ಲಿ, ತಾಲೂಕು ಪ್ರಧಾನ ಕಾರ್ಯದರ್ಶಿ ವೀರೇಶ ಇಟಗಿ, ಉಪಾಧ್ಯಕ್ಷ ಅಮರೇಶ್ವರಸ್ವಾಮಿ ಕಂದಗಲಮಠ, ಸಹಕಾರ್ಯದರ್ಶಿ ರುದ್ರೇಶ ಆರುಬೆರಳಿನ, ಬಸವರಾಜ ಕೊಪ್ಪದ, ಹಿರಿಯ ಪತ್ರಕರ್ತರಾದ ರುದ್ರಪ್ಪ ಭಂಡಾರಿ, ಮಂಜುನಾಥ ಅಂಗಡಿ, ಸದಸ್ಯರಾದ ಬಸವರೆಡ್ಡಿ ಬಿಡನಾಳ, ಚಂದ್ರು ಆರುಬೆರಳಿನ, ಕನಕರಾಯ ಬಂಜತ್ರಿ, ರವಿ ಆಗೋಲಿ, ಶಿವರಾಜ ದೊಡ್ಡಮನಿ, ರವಿ ಹಳ್ಳಿಕೇರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka